ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 19

ಮಾರ್ಚ್ ೯ ೧೯೫೮

*

ಪುಟ ೧೦ ಬೆಲೆ: ೧೩ ನ. ಪೈಸೆ

★

ವಿಮಾನ ಕಾರ್ಖಾನೆ ನೌಕರರಿಗೆ ನ್ಯಾಯ ದೊರಕಲಿ

ಫೆಬ್ರುವರಿ 25 ರಂದು ವಿಮಾನ ಕಾರ್ಖಾನೆ ನೌಕರರ ಮೇಲೆ ಪೋಲೀಸರ ಅಮಾನುಷ ದಬ್ಬಾಳಿಕೆ ನಡೆದು, ಕಾರ್ಖಾನೆಯ ಲಾಕ್‌ಔಟ್ ಆಗಿ ಒಂದು ವಾರ ಕಳೆದಿದೆ. ಪ್ರಕ್ಷುಬ್ಧ ವಾತಾವರಣ ಇನ್ನೂ ಮುಂದುವರಿಯುತ್ತಿದೆ. ವಿಮಾನ ಕಾರ್ಖಾನೆಯ ಮ್ಯಾನೇಜ್‌ಮೆಂಟು, ನೌಕರರ ಐಕ್ಯತೆಯನ್ನು, ಸಂಘವನ್ನು ಮುರಿಯಲು ಹವಣಿಸುತ್ತಿದೆ. ಸರಕಾರ ನೂರಾರು ಕಾರ್ಮಿಕರ ಮೇಲೆ ಪೋಲೀಸು ಕೇಸುಗಳನ್ನು ಹಾಕಿದೆ. ಅನೇಕರು ಇನ್ನೂ ಜೈಲಿನಲ್ಲಿದ್ದಾರೆ. ಪರಿಸ್ಥಿತಿ ಹೀಗೇ ಇದ್ದಲ್ಲಿ ಪ್ರಶ್ನೆಗಳ ಇತ್ಯರ್ಥ ಖಂಡಿತ ಆಗದು.

ಪೋಲೀಸು ದಬ್ಬಾಳಿಕೆ ಬಗ್ಗೆ ವಿಚಾರಣೆ ಅಗತ್ಯ

ಫೆಬ್ರುವರಿ 25ರಂದು ನಡೆದ ಗೋಲೀಬಾರಿನಲ್ಲಿ ಒಬ್ಬ ಮೃತನಾಗಿ ಅನೇಕರಿಗೆ ಗಾಯಗಳಾಗಿವೆ. ಅಲ್ಲದೆ ಲಾಠಿ ಚಾರ್ಜಿನಿಂದ ಗಾಯಗೊಂಡವರೂ ಅನೇಕರಿದ್ದಾರೆ. ಸರಕಾರವು ಈ ಘಟನೆಯ ಬಗ್ಗೆ ವಿಚಾರಣೆ ನಡೆಸಬೇಕೆಂದು ಸಾರ್ವಜನಿಕ ಒತ್ತಾಯವಿದ್ದರೂ ಸಹ, ಸರಕಾರ ಸುಮ್ಮನಿದೆ. ವಿಧಾನ ಸಭೆಯಲ್ಲೂ ಮತ್ತು ವಿಧಾನ ಪರಿಷತ್ತಿನಲ್ಲಿಯೂ ವಿರೋಧ ಪಕ್ಷದ ಸದಸ್ಯರುಗಳು ವಿಚಾರಣೆ ನಡೆಸಬೇಕೆಂದು ಒತ್ತಾಯ ಪಡಿಸಿದ್ದಾರೆ. ಆದರೆ ಗೃಹಸಚಿವ ಪೂಣಚ್ಚರವರು ಈ ವಿಷಯವನ್ನು ಕಡೆಗಣಿಸಿ ಮಾತನಾಡಿದ್ದಾರೆ. ಕಮ್ಯೂನಿಸ್ಟ್ ಸದಸ್ಯರಾದ ಎಂ. ಸಿ. ನರಸಿಂಹನ್‌ರವರು ವಿಮಾನ ಕಾರ್ಖಾನೆಯ ನೌಕರರ ಮೇಲೆ ಪೋಲೀಸರ ಗೋಲೀಬಾರಿನ ಕುರಿತು, ಲಾಕ್‌ಔಟಿನಿಂದ ಉದ್ಭವಿಸಿರುವ ಪ್ರಶ್ನೆಯ ಬಗ್ಗೆ ಮಂಡಿಸಿದ್ದ ನಿಲುವಳಿ ಸೂಚನೆಯನ್ನು ತಳ್ಳಿ ಹಾಕಲಾಗಿದೆ.

ನೆರೆರಾಜ್ಯವಾದ ಕೇರಳದಲ್ಲಿ ಸಾಮಾನ್ಯ ಲಾಠಿಚಾರ್ಜ್ ಹಾಗೂ ಟಿಯರ್‌ಗ್ಯಾಸ್ ಪ್ರಯೋಗ ನಡೆದಿದ್ದರೆ, ಅದಕ್ಕೂ ಸಹ ಇಂದು ವಿಚಾರಣೆ ನಡೆಸಲು ಅನುಮತಿ ಇತ್ತಿದೆ. ಅಲ್ಲದೆ ಕೈಗಾರಿಕಾ ವಿವಾದದಲ್ಲಿ ಪೋಲೀಸರ ಪ್ರವೇಶವನ್ನು ಪ್ರತಿಬಂಧಿಸಿದೆ. ನಮ್ಮ ರಾಜ್ಯದಲ್ಲಿ ಇದಕ್ಕೆ ವಿರುದ್ಧವಾಗಿದೆ. ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಶಾಂತರೀತಿಯಲ್ಲಿ ಪ್ರದರ್ಶನ ನಡೆಸಿದಲ್ಲಿ ಪೋಲೀಸರು ಹಲ್ಲೆ ನಡೆಸುತ್ತಿದ್ದಾರೆ. ಕಾರ್ಮಿಕರ ಸಂಘಟನೆಗಳನ್ನು ಮುರಿಯಲು ಪೋಲೀಸರು ಮಾಲೀಕರಿಗೆ ನೆರವಾಗುತ್ತಿದ್ದಾರೆ.

ಇಷ್ಟೇ ಅಲ್ಲದೆ ಬಂಧಿತರಾದ ಕೆಲಸಗಾರರ ಮೇಲೆ ಪೋಲೀಸರ ದೌರ್ಜನ್ಯವು ವಿಪರೀತವಾಗಿದೆ. ಲಾಕ್‌ಅಪ್‌ಗಳಲ್ಲಿ ಹೊಡೆಯುವುದು, ಊಟ ಕೊಡದಿರುವುದು ಪರಂಪರೆಯಾಗಿ ಬೆಳೆದು ಬಂದಿದೆ. ಫೆಬ್ರುವರಿ 25 ಮತ್ತು 26 ರಂದು ಬಂಧಿತರಾದ ನೂರಾರು ಮಂದಿ ವಿಮಾನ ಕಾರ್ಖಾನೆ ನೌಕರರಿಗೆ ಎರಡು ಮೂರು ದಿನಗಳು ಅನ್ನ ನೀರು ಕೊಡದೆ ಪೋಲೀಸರು ದಬ್ಬಾಳಿಕೆ ನಡೆಸಿದ್ದಾರೆಂದು ತಿಳಿದು ಬಂದಿದೆ. ಇದು ನಾಗರಿಕ ಸರಕಾರದ ಲಕ್ಷಣವೇ ?

ಸರಕಾರವು ಕೂಡಲೇ ಗೋಲೀಬಾರಿನ ಪ್ರಸಂಗದ ಬಗ್ಗೆ ವಿಚಾರಣೆ ನಡೆಸಬೇಕೆಂದೂ, ಈ ನೌಕರರ ಮೇಲೆ ಮತ್ತು ಇತರ ಟ್ರೇಡ್ ಯೂನಿಯನ್ ನಾಯಕರುಗಳ ಮೇಲೆ ಹಾಕಲಾಗಿರುವ ಎಲ್ಲ ಪೋಲೀಸು ಕೇಸುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದೂ ಒತ್ತಾಯ ಪಡಿಸುತ್ತೇವೆ. ನಗರದಾದ್ಯಂತ 144ನೇ ಸೆಕ್ಷನ್ ಜಾರಿಮಾಡಿ ಬಳಸಲಾಗುತ್ತಿದೆ. ಸಾರ್ವಜನಿಕ ಹಕ್ಕನ್ನು ಕಸಿದುಕೊಳ್ಳುವ ಈ ಆಜ್ಞೆ ಕೂಡಲೇ ಹಿಂತೆಗೆದುಕೊಳ್ಳುವುದು ಅಗತ್ಯ.

ಮ್ಯಾನೇಜ್‌ಮೆಂಟಿನ ಕುಹಕ ನೀತಿ

ವಿಮಾನ ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ ನಾಗೇಶ್‌ರವರು ನೌಕರರ ಸಂಘವನ್ನು ಮುರಿಯಲು, ನೌಕರರ ಐಕ್ಯತೆಯನ್ನು ಮುರಿಯಲು ಪಣ ತೊಟ್ಟಿರುವಂತೆ ತೋರುತ್ತದೆ. ಫೆಬ್ರುವರಿ 25ರ ಘಟನೆಯ ನಂತರ ದೆಹಲಿಗೆ ಹೋಗಿ ಹಿಂತಿರುಗಿದ ನಂತರ ಮನೆ ಮುರುಕ ನೀತಿಯನ್ನನುಸರಿಸುತ್ತಿದ್ದಾರೆ. ದೆಹಲಿಯಲ್ಲಿ ಅಧಿಕಾರಿಗಳು ಕೂಡಲೇ ಲಾಕ್‌ಔಟ್ ತೆಗೆದು, ಎಲ್ಲ ಕೇಸುಗಳನ್ನು ವಾಪಸು ತೆಗೆದುಕೊಂಡು ಶಾಂತ ವಾತಾವರಣ ಕಲ್ಪಿಸಿ

ದ್ದಾರೆ. ಈಗಾಗಲೇ ಸುಮಾರು 20 ಡಿಪಾರ್ಟ್‌ಮೆಂಟ್‌ಗಳ ಲಾಕ್‌ಔಟ್ ತೆರೆಯಲಾಗಿದೆ. ಮ್ಯಾನೇಜ್‌ಮೆಂಟಿನವರು ನೌಕರರನ್ನು ತಪ್ಪುದಾರಿಗೆಳೆಯಲು 3000 ದಿಂದ 4000ದವರೆಗೆ ನೌಕರರು ಕಾರ್ಖಾನೆಗೆ ಬರುತ್ತಿರುವರೆಂದು ಪ್ರತಿದಿನ ಹೇಳಿಕೆ ನೀಡುತ್ತಿದ್ದಾರೆ. ಆದರೆ ವಾಸ್ತವ ಪರಿಸ್ಥಿತಿ ಇದಕ್ಕೆ ಪ್ರತಿಯಾಗಿದೆ. ಕಳೆದಬಾರಿ 1951 ರಲ್ಲಿ ಮುಷ್ಕರ ನಡೆದಾಗ ವಿಮಾನ ಕಾರ್ಖಾನೆ ಮ್ಯಾನೇಜ್‌ಮೆಂಟ್ ಇದೇ ನೀತಿ ಅನುಸರಿಸಿ ನೌಕರರನ್ನು ಮೋಸಗೊಳಿಸಿತು. ಈ ಬಾರಿ ನೌಕರರು ಪಾಠ ಕಲಿತಿದ್ದಾರೆ. ಏನೇ ಆಗಲಿ ಈ ಬಾರಿ ಕೊನೆಯವರೆಗೆ ಹೋರಾಡಲು ನಿರ್ಧರಿಸಿದ್ದಾರೆ. ಮಾರ್ಚ್ 5ರಂದು ರೈಲ್‌ಕೋಚ್ ಸೆಕ್ಷನ್

ಸೂಕ್ತ ವಾತಾವರಣ ಕಲ್ಪಿಸಲು ಸರಕಾರ ಕ್ರಮತೆಗೆದುಕೊಳ್ಳಲಿ

ಸಭೆ ಮೆರವಣಿಗೆಗಳನ್ನು ಪ್ರತಿಬಂಧಿಸಿ ಸಾರ್ವಜನಿಕ ಹಕ್ಕುಗಳನ್ನು ಮೊಟಕು ಮಾಡಲಾಗಿದೆ. ಸಾಮಾನ್ಯ ಸಾರ್ವಜನಿಕ ಚಟುವಟಿಕೆಗಳನ್ನು ನಡೆಸಲು ಆತಂಕವಾಗಿದೆ. ಸಾಮ್ರಾಜ್ಯಶಾಹಿಗಳ ಕಾಲದಿಂದಲೂ ಉಳಿದುಕೊಂಡಿರುವ ಈ ಪ್ರತಿಬಂಧಕಾಜ್ಞೆಯನ್ನು ಮನಬಂದಂತೆ

ಸಂಧಾನ ನಡೆಸಬೇಕೆಂದು ಅವರಿಗೆ ಸೂಚಿಸಿದ್ದಾರೆಂದು ತಿಳಿದು ಬಂದಿದೆ. ಆದರೆ ಶ್ರೀ ನಾಗೇಶ್ ಇದಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಸಂಘದ ಪ್ರತಿನಿಧಿಗಳೊಂದಿಗೆ ಮಾತನಾಡಲು ನಿರಾಕರಿಸಿದ್ದಾರೆ. ತುಂಡು ತುಂಡಾಗಿ ಲಾಕ್‌ಔಟ್ ತೆಗೆಯಲು ತೀರ್ಮಾನಿಸಿ ಅದರಂತೆ ನಡೆಸುತ್ತಿ

ನ್ನಿನ ಒಂದು ಸಾವಿರ ಮಂದಿ ನೌಕರರು ಸಂಬಳ ಪಡೆಯಲು ಹೋಗಿದ್ದಾಗ ಮ್ಯಾನೇಜ್‌ಮೆಂಟು ಅವರು ಕಡೆಯ ಪಕ್ಷ ನಾಲ್ಕು ಘಂಟೆಗಳ ಕಾಲ ಕೆಲಸ ಮಾಡಬೇಕೆಂತಲೂ, ಕ್ಷಮಾಪಣೆ ಪತ್ರಕ್ಕೆ ಸಹಿ ಹಾಕಬೇಕೆಂತಲೂ ಒತ್ತಾಯ ಪಡಿಸಿತೆಂದೂ ಆದರೆ ನೌಕರರು ತಿರಸ್ಕರಿಸಿ ಹಿಂತಿರುಗಿದರೆಂದೂ ಸಂಘದ ವಕ್ತಾರರೊಬ್ಬರು ತಿಳಿಸಿದ್ದಾರೆ. ಈ ಬಾರಿ ನೌಕರರು ಮ್ಯಾನೇಜ್‌ಮೆಂಟಿನ ಕುಟಿಲ ನೀತಿಗೆ ಬಲಿಯಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆ.

ಸರಕಾರ ಏನು ಮಾಡುತ್ತಿದೆ?

ಪರಿಸ್ಥಿತಿಯು ಪ್ರಕ್ಷುಬ್ಧವಾಗಿದ್ದರೂ ಸರಕಾರ ಕೈಕಟ್ಟಿ ಕುಳಿತಿದೆ. ಕೇಂದ್ರ ಸರಕಾರದ ಮೇಲೆ ಜವಾಬುದಾರಿ ಹಾಕಿ ಸುಮ್ಮನೆ ಕುಳಿತಿದೆ. ಮೈಸೂರು ಸರಕಾರವು ಕೈಗಾರಿಕೆಯ ಹಿತದೃಷ್ಟಿಯಿಂದ, ನೌಕರರ ಮತ್ತು ಕೈಗಾರಿಕಾ ಶಾಂತಿಯ ಹಿತದೃಷ್ಟಿಯಿಂದ ತಾನು ತೆಗೆದುಕೊಳ್ಳಲಿದೆ. ಸಾಧ್ಯವಿರುವ ಕ್ರಮಗಳನ್ನು ತೆಗೆದುಕೊಂಡಿದೆ. ಶ್ರೀ ನಾಗೇಶರವರವೇ ಸರಕಾರವಾಗಿದೆ ಎಂದು ವದಂತಿ ಹಬ್ಬುತ್ತಿದೆ. ಅವರು ಹೇಳಿದ್ದಕ್ಕೆ ಸರಕಾರ ತಾಳ ಹಾಕುತ್ತಿದೆ ಏನೋ ಎಂಬ ಶಂಕೆ ನೌಕರರಲ್ಲಿ ಮೂಡಿದೆ. ವಿಮಾನಕಾರ್ಖಾನೆ ಮ್ಯಾನೇಜ್‌ಮೆಂಟಿಗೆ ಪೋಲೀಸು ಠಾಣೆಯನ್ನೇ ವಹಿಸಿಕೊಟ್ಟಿರುವಂತಿದೆ. ರಿಜರ್ವ್ ಪೋಲೀಸು ಪ್ರಡೆ ವಿಮಾನ ಕಾರ್ಖಾನೆಯ ಬಳಿ ಇವೆ.

(ಕೊನೆ ಪುಟ ನೋಡಿ)

ಪೆರಿಯಾಪಟ್ಣ ಕ್ಷೇತ್ರದಿಂದ ಕಮ್ಯೂನಿಸ್ಟ್ ಸ್ಪರ್ಧೆ

ಮೈಸೂರು ಶಾಸನಸಭೆಗೆ ಪೆರಿಯಾಪಟ್ಣ ಕ್ಷೇತ್ರದಿಂದ ಏಪ್ರಿಲ್ 13ರಂದು ನಡೆಯಲಿರುವ ಉಪಚುನಾವಣೆಗೆ ಕೊಡಗು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿಯೂ, ಕೊಡಗು ಜಿಲ್ಲಾ ತೋಟ ಕೆಲಸಗಾರರ ಸಂಘದ ಕಾರ್ಯದರ್ಶಿಯೂ ಆದ ಕಾ| ಬಿ. ಎನ್. ಕುಟ್ಟಪ್ಪನವರನ್ನು ಕಮ್ಯೂನಿಸ್ಟ್ ಪಾರ್ಟಿಯ ಉಮೇದುವಾರರನ್ನಾಗಿ ನಿಲ್ಲಿಸಲಾಗಿದೆ.

ಕಾಮ್ರೇಡ್ ಕುಟ್ಟಪ್ಪನವರು ಕೊಡಗಿನ ಜನಪ್ರಿಯ ನಾಯಕರಾಗಿದ್ದಾರೆ. ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ್ದಲ್ಲದೆ, ರೈತರ ಮತ್ತು ಕಾರ್ಮಿಕರ ಸಂಘಟನೆಗಳನ್ನು ಕಟ್ಟಿ ಹೋರಾಡುತ್ತಿದ್ದಾರೆ. ಕೊಡಗಿನ ತೋಟಗಳಲ್ಲಿ ಶ್ರಮಿಸುತ್ತಿರುವ ಸಹಸ್ರಾರು ಕಾರ್ಮಿಕರನ್ನು ಸಂಘಟಿಸಿ ಅವರ ಮೇಲೆ ನಡೆಯುತ್ತಿರುವ ಮಾಲಿಕರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಹೋರಾಡುತ್ತಿದ್ದಾರೆ. ಅವರ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಪ್ರಯತ್ನದಿಂದ ಕೊಡಗಿನ ಜನತೆ ಜಾಗೃತರಾಗಿದ್ದಾರೆ. ಈ ಹೋರಾಟಗಳಲ್ಲಿ ಅವರು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಹಲವಾರು ಖಟ್ಲೆಗಳೂ ಅವರ ಮೇಲೆ ಇವೆ.

ಜನತೆಗೋಸ್ಕರ ನಿರಂತರ ದುಡಿಯುವ ಕಾಮ್ರೇಡ್ ಕುಟ್ಟಪ್ಪನವರನ್ನು ಜಯಪ್ರದಗೊಳಿಸಲು ಪೆರಿಯಾಪಟ್ಣದ ಮತದಾರರೂ, ಸಮಗ್ರ ಜನತೆಯೂ ಪ್ರಯತ್ನಿಸುವರೆಂದು ನಾವು ನಂಬಿದ್ದೇವೆ. ಈ ಚುನಾವಣೆಯಲ್ಲಿ ಪಾರ್ಟಿಯ ಉಮೇದುವಾರರಿಗೆ ಪ್ರಾಂತದ ಎಲ್ಲ ಪಾರ್ಟಿ ಘಟಕಗಳೂ ಸದಸ್ಯರೂ ಸಹಾಯ ನೀಡಬೇಕೆಂದು ಕೋರುತ್ತೇವೆ.

ಶೇಷಾದ್ರಿಪುರ ಪೋಲೀಸ್ ಸ್ಟೇಷನಿನಲ್ಲಿ

ಮಹಿಳೆಯೋರ್ವಳ ಮರಣ!

ಶೇಷಾದ್ರಿಪುರ ಪೋಲೀಸ್ ಸ್ಟೇಷನಿನಲ್ಲಿ ಮಹಿಳೆಯೋರ್ವಳು ಅಕಾಲ ಮರಣಕ್ಕೆ ತುತ್ತಾಗಿದ್ದಾಳೆಂದು ನಮಗೆ ವರದಿಯಾಗಿದೆ. ಈ ಸಾವು ಶನಿವಾರ ನಡೆದಿದ್ದು ನಗರದ ನಾಗರಿಕರು ಈ ಬಗ್ಗೆ ಏನೇನೋ ಮಾತನಾಡುತ್ತಿರುವುದು ಕೇಳಿ ಬರುತ್ತಿದೆ.

ಯುವತಿಯೂ ಆರೋಗ್ಯವಂತಳೂ ಆಗಿರುವ ಈ ಮಹಿಳೆಯ ಮರಣಕ್ಕೆ ಕಾರಣವೇನು? ಪೋಲೀಸ್ ಸ್ಟೇಷನೆಂಬುದು ಫಾಸಿಸ್ಟರ 'ಸಾವಿನ ತಾಣ' ವಲ್ಲವಷ್ಟೆ! ಇಲ್ಲವಾದಲ್ಲಿ ಜನರು 'ಇವಳ ಮೇಲೆ ಮಾನಾಪಹರಣದ ರಾಕ್ಷಸೀ ಬಲತ್ಕಾರ ನಡೆದು ಇವಳು ಸತ್ತು ಹೋದಳು.' ಎಂದು ಆಡಿಕೊಳ್ಳುತ್ತಿರಲಿಲ್ಲವಷ್ಟೆ! ನಾಗರಿಕರ ಮಾನ-ಪ್ರಾಣ ರಕ್ಷಣೆಯ ಹೊಣೆ ಹೊತ್ತಂತಹ ನಮ್ಮ ಪೋಲೀಸ್ ಖಾತೆ ಈ ಎರಡನ್ನು ಅಪಹರಣ ಮಾಡುವಷ್ಟರ ಮಟ್ಟಿನ ಮೃಗೀಯತೆಗೆ ಇಳಿದಿದೆಯೇ ಎಂಬ ಪ್ರಶ್ನೆ ನಾಗರಿಕರಲ್ಲಿ ಎದ್ದಿರುವುದು ನಿಜ. ಈ ಸಂಶಯದ ನಿವಾರಣೆ ಆಗಬೇಕು.

ಉನ್ನತ ಪೋಲೀಸ್ ಅಧಿಕಾರಿಗಳು ಈ ಬಗ್ಗೆ ಕೂಡಲೇ ವಿಚಾರಣೆ ನಡೆಸಬೇಕು. ಎಚ್. ಎ. ಎಲ್. ಕಾರ್ಮಿಕರ ಮೇಲೆ ಗೋಳಿಬಾರು ನಡೆಸಿ ಉತ್ತರವೀಯದೆ ಮೂಕರಂತೆ ಕುಳಿತ ಪೋಲೀಸ್ ಮಂತ್ರಿ ಪೂಣಚ್ಚರು ಈ ಬಗ್ಗೆ ಏನು ಹೇಳುವರು? ಗಾಳಿ ಬರದೆ ಎಲೆ ಅಲ್ಲಾಡದು ತಾನೆ! ನಗರದ ನಾಗರಿಕರ ಬೀತಿ ಮತ್ತು ಸಂಶಯ ನಿವಾರಣೆಗೆ ತಕ್ಷಣ ವಿಚಾರಣೆಯಾಗಲಿ! ತಮ್ಮದೇನೂ ತಪ್ಪಿಲ್ಲವೆಂದು ಹೇಳಿ ಎಂದಿನಂತೆ ಪೋಲೀಸರನ್ನು ರಕ್ಷಿಸುವ ಕೆಟ್ಟ ಚಾಳಿಯನ್ನು ಬಿಟ್ಟು, ವಿಚಾರಣೆ ನಡೆಸಲಿ.

ಹಟ್ಟಿ ಚಿನ್ನದಗನಿ ಕಾರ್ಮಿಕರ ಬಗ್ಗೆ ಮಲತಾಯಿ ಧೋರಣೆ ಸಲ್ಲದು!

ಹಟ್ಟಿ ಚಿನ್ನದಗನಿ ಕಾರ್ಮಿಕ ಸಂಘದ ನಾಯಕರು ಗೃಹ ಮಂತ್ರಿಯವರನ್ನು ಕಂಡು, ಅವರಲ್ಲಿ ಒಂದು ಮನವಿಯನ್ನು ರ್ಪಿಸಿದ್ದಾರೆ. ಈ ಮನವಿಯಲ್ಲಿ, ಹಟ್ಟಿ ಚಿನ್ನದ ಗನಿಯ ಆಡಳಿತವರ್ಗ ನಡೆಸುತ್ತಿರುವ ದುರಾಡಳಿತೆ, ಹಣದ ದುರುಪಯೋಗದ ಬಗ್ಗೆ ಗೃಹಮಂತ್ರಿಗಳ ದೃಷ್ಟಿಯನ್ನು ಸೆಳೆಯಲಾಗಿದೆ.

ಹಟ್ಟಿ ಚಿನ್ನದ ಗನಿಯೂ ಕೆ. ಜಿ. ಎಫ್. ಚಿನ್ನದ ಗನಿಯು, ಒಂದೇ ಆಡಳಿತದಡಿಯಲ್ಲಿದ್ದು ಈ ಎರಡು ಗನಿಗಳ ಕಾರ್ಮಿಕರ ಸಂಬಳ, ಬೋನಸ್, ತುಟ್ಟಿಭತ್ತೆ ಇವುಗಳಲ್ಲಿ ತಾರತಮ್ಯವಿರುವುದನ್ನು ಎತ್ತಿ ತೋರಿಸಿ, ಈ ಮಲತಾಯಿ ಧೋರಣೆಯು ಕೊನೆಗಾಣಿಸನಂತಾಗುಬೇಕೆಂದು ಹೇಳಲಾಗಿದೆ.

ಇನ್ನು ಕಾರ್ಮಿಕರ ನಿಜವಾದ ಪ್ರತಿನಿಧಿತ್ವ ಪಡೆದ ಟ್ರೇಡ್ ಯೂನಿಯನನ್ನು ಅಂಗೀಕರಿಸದೆ, ಆಡಳಿತವರ್ಗದ ಭಂಟತನ ಸ್ವೀಕರಿಸಿದ 'ಇಂಟಕ'ನ್ನು ಒಪ್ಪಿ, ಕಾರ್ಮಿಕರ ಮೇಲೆ ಈ ಸಂಘಟನೆಯನ್ನು ಹೇರಲಾದುದನ್ನು, ಈ ನಾಯಕರುಗಳೆಂದು ಹೇಳಿಕೊಳ್ಳುವವರು ಕಾರ್ಮಿಕರ ಸಂಬಳದಲ್ಲಿ ಅಪ್ಪು ಪಾಲನ್ನು 'ಎತ್ತಿ ಹಾಕುತ್ತಿರುವುದನ್ನ ಈ ಮನವಿಯಲ್ಲಿ ತಿಳಿಸಲಾಗಿದೆ.

ಇತ್ತ ಚಿನ್ನದ ಗನಿಯಿಂದ ಬಂಗಾರದ ಕಳ್ಳತದ ನಡೆಯುತ್ತಿದ್ದು ಪೋಲೀಸರು, ಅಪರಾಧಿಗಳನ್ನು ಪತ್ತೆ ಹಚ್ಚುವ ಬದಲು, ವೃಥಾ ಕಾರ್ಮಿಕರಿಗೆ ನಿತ್ಯ ಕಿರುಕುಳ ಕೊಡುತ್ತಿದಾರೆಂದೂ ಇಲ್ಲಿನ ಪೋಲೀಸ್ ಖಾತೆಯೇ ನಾಲಾಯಕ್ಕಾಗಿದೆಯೆಂದೂ ಹೇಳಲಾಗಿದೆ.

ಗೃಹ ಮಂತ್ರಿಗಳು, ಕಾರ್ಮಿಕರ ಈ ದೂರುಗಳನ್ನು ಗಮನಿಸಿ ಯೋಗ್ಯ ಕಾರ್ಯಕ್ರಮ ವಹಿಸುವ ಭರವಸೆ ಇತ್ತಿರುತ್ತಾರೆ. ಹಾಗೂ ಕೈಗಾರಿಕಾ ಶಾಂತಿ ಒಪ್ಪಂದದ ಬಗ್ಗೆ ಪ್ರಯತ್ನಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ. ಈ ಭರವಸೆಗಳು ಆದಷ್ಟು ಬೇಗ ಜಾರಿಗೆ ಬರಲೆಂದು ನಾವು ಆಶಿಸುತ್ತೇವೆ.

ಪೋಲೀಸ್ ಸುಪರಿಂಡೆಂಟರ ಅನಾಗರಿಕ ವರ್ತನೆ!

ಇದೇ ತಾ| 18-2-58ರಂದು ಬೆಳಿಗ್ಗೆ ಅವಾನಿಗೆ ಹೋಗುತ್ತಿದ್ದ, ಕೋಲಾರ ಜಿಲ್ಲೆಯ ಪೋಲೀಸು ಸೂಪರಿಂಡೆಂಟರು, ಬಸ್ಸಿನಲ್ಲಿ ತಮ್ಮ ಅನಾಗರಿಕ ವರ್ತನೆಯನ್ನು ಪ್ರದರ್ಶಿಸಿರುವುದರ ವರದಿಯಾಗಿದೆ. ಏನೊಂದು ಕಾರಣವಿಲ್ಲದೆ ಈ ಪೋಲೀಸ್ ಅಧಿಕಾರಿಯು, ಬಸ್ಸಿನ ಕಂಡಕ್ಟರರಾದ ಶ್ರೀ ನೂರುಲ್ಲಾಖಾನ್ ಪೈವೇಲೇರಿ, ಥಳಿಸಿರುತ್ತಾರೆಂದು ತಿಳಿದು ಬಂದಿದೆ. ಪೋಲೀಸ್ ಅಧಿಕಾರಿಯು ಈ ಉದ್ಧಟತನ ಜಿಲ್ಲೆಯ ಮೋಟಾರು ಕಾರ್ಮಿಕರನ್ನು ಕೆರಳಿಸಿದೆ, ಈ ಬಗ್ಗೆ ಉನ್ನತಾಧಿಕಾರಿಗಳಲ್ಲಿ ದೂರನ್ನು ಕೊಡಲಾಗಿದೆ.

ಇಲ್ಲಿ ತಲೆದೋರುವ ಮುಖ್ಯ ಪ್ರಶ್ನೆ ಇದು: ಪೋಲೀಸ್ ಅಧಿಕಾರಿಯು ಕಾನೂನಿನ ರಕ್ಷಕನೆಂಬ ಮಾತ್ರಕ್ಕೆ ಸಿಕ್ಕಾಬಟ್ಟೆ ಸಾಮಾನ್ಯ ಜನರನ್ನು ಥಳಿಸಬಹುದೆ? ಕಂಡಕ್ಟರನ ತಪ್ಪಿದ್ದರೆ ಕೋರ್ಟಿನ ದ್ವಾರಾ ತೀರ್ಮಾನಿಸಬಹುದಿತ್ತು. ಉಚ್ಚ ಅಧಿಕಾರಿಯೇ ಈ ರೀತಿಯ ಕೀಳ್ಮಟ್ಟದ ವರ್ತನೆ ತೋರಿದರೆ ಇನ್ನು ಬರೇ ಪೋಲೀಸರು ಈ ಮೇಲ್ಪಂಕ್ತಿಯನ್ನು ಅನುಸರಿಸದಿರುವರೆ? ಇನ್ನು ಮುಂದಾದರೂ ಈ ಪೋಲೀಸ್ ಅಧಿಕಾರಿಗಳು ಬ್ರಿಟಿಷ್ ಕಾಲದ ಅನಾಗರಿಕ ವರ್ತನೆಯನ್ನು ಮರೆತು ತಮ್ಮನ್ನು ತಾವೇ ತಿದ್ದಿಕೊಂಡು, ಸಾಮಾನ್ಯ ಪೋಲೀಸರಿಗೆ ಮೇಲ್ಪಂಕ್ತಿ ಹಾಕಿ ಕೊಡುವರೆ?

ಪ್ರಾಂತೀಯ ಸುದ್ದಿ ಸಂಗ್ರಹ

ಯುವಕ ಸಂಘದ ಆಶ್ರಯದಲ್ಲಿ ಪ್ರಿ - ಯೂನಿವರ್ಸಿಟಿ ವಿದ್ಯಾರ್ಥಿಗಳಿಗೆ ಉಪನ್ಯಾಸ

ತಾ. 2-3-58ರ ಸಂಜೆ 5ಘಂಟೆಗೆ ತುಮಕೂರು ಪುರಭವನದಲ್ಲಿ "ಯುವಕ ಸಂಘ"ದ ಆಶ್ರಯದಲ್ಲಿ ಏರ್ಪಡಿಸಿದ್ದ ಉಪನ್ಯಾಸಕ್ಕೆ ಪ್ರಿ ಯೂನಿವರ್ಸಿಟಿಯ ಸುಮಾರು 300 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಆಗಮಿಸಿದ್ದರು.

ಯುವಕ ಸಂಘದ ಉಪನ್ಯಾಸವು ಪ್ರಾರಂಭವಾಗುವ ಮುನ್ನ ಶ್ರೀ ಗುರುಸಿಂಹರವರು ಅಂದಿನ ಉಪನ್ಯಾಸಕರಾದ ಶ್ರೀ ಎಂ. ಚನ್ನವೀರಯ್ಯ ಎಂ.ಎ. ಅವರನ್ನು ಉಪನ್ಯಾಸ ತೆಗೆದು ಕೊಳ್ಳಲು ಯುವಕ ಸಂಘದ ಪರವಾಗಿ ವಿನಂತಿಸಿ ಕೊಂಡರು.

ಶ್ರೀ ಎಂ. ಚನ್ನವೀರಯ್ಯ ಎಂ. ಎ. ಅವರು ಸುಮಾರು 2 ಘಂಟೆಗಳಿಗಿಂತ ಹೆಚ್ಚು ಕಾಲ ವಿದ್ಯಾರ್ಥಿಗಳನ್ನುದ್ದೇಶಿಸಿ "Merchant of Venice" ನಾಟಕವನ್ನು ಬಹಳ ಸ್ವಾರಸ್ಯವಾಗಿ ತಿಳಿಯಾದ ಭಾಷೆಯಲ್ಲಿ ವಿವರಿಸಿದರು. ನಂತರ ನಮ್ಮ ಕಾಲೇಜಿನ ಅದ್ಯಾಪಕರುಗಳು "ಯುವಕ ಸಂಘದ" ಇಂತಹ ಉಪನ್ಯಾಸಗಳಿಗೆ ಎಲ್ಲರೂ ಸಹಕರಿಸುತ್ತೇವೆಂಬ ಭರವಸೆ ಕೊಟ್ಟರು. ಮತ್ತು ನಮಗೂ ಸಹ ಈ ಯುವಕ ಸಂಘದಿಂದಾಗಿ ಮುಂದೆ ನಿಕಟವಾಗಿ ಮತ್ತಿ ವಿದ್ಯಾರ್ಥಿಗಳೊಡನೆ ಮಾತನಾಡಲು ಅವಕಾಶ ಸಿಕ್ಕಿರುವುದು ಒಂದು ಆನಂದದಾಯಕ ವಿಷಯವಾಗಿದೆ ಎಂದರು.

ನಂತರ ಶ್ರೀ ಗುರುಸಿಂಹರವರು 'ಯುವಕ ಸಂಘ'ದ ಪರವಾಗಿ ಉಪನ್ಯಾಸಕರಿಗೆ ಅಭಿನಂದಿಸುತ್ತಾ ಇನ್ನು ಮುಂದೆ ಹೆಚ್ಚು ಉಪನ್ಯಾಸಗಳನ್ನು ನಡೆಸಲು ಅದ್ಯಾಪಕರ ಸಹಕಾರದ ಭರವಸೆಯಿರುವುದರಿಂದ 'ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಯುವಕ ಸಂಘದ ಸದಸ್ಯರಾಗಿ ಬೆಂಬಲ ಕೊಡಬೇಕೆಂದರು. ಯುವಕ ಸಂಘದ ಪರವಾಗಿ ನೀವು ಹೆಚ್ಚು ಉತ್ಸಾಹಿಗಳಾಗಿ ಸಹಕರಿಸುತ್ತಿರುವುದರಿಂದ ನಿಮ್ಮೆಲ್ಲರಿಗೂ ಯುವಕ ಸಂಘದ ಪರವಾಗಿ ಇನ್ನು ಮುಂದೆಯೂ ಸಹ ಸ್ವಾಗತಿಸುತ್ತೇವೆಂದು ಅಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

ಕೆ. ಜಿ. ಎಫ್.

ಕೆ. ಜಿ.ಎಫ್. ಕಮ್ಯೂನಿಸ್ಟ್ ಪಾರ್ಟಿಯು ತಾ|| 27-2-58 ರಂದು ಸೇರಿದ ಸಭೆಯಲ್ಲಿ ಬೆಂಗಳೂರಿನಲ್ಲಿ ಎಚ್. ಎ. ಎಲ್. ಕಾರ್ಮಿಕರ ಮೇಲೆ ನಡೆದ ಅಮಾನುಷ ಗೋಳಿಬಾರನ್ನು ಉಗ್ರವಾಗಿ ಖಂಡಿಸಿತು. ಹಾಗೂ ಇತರ ಕಾರ್ಮಿಕ ವರ್ಗದ ಮೇಲೆ ನಡೆದ ಲಾಠಿ ಚಾರ್ಜನ್ನೂ ಪ್ರತಿಭಟಿಸಿ ನಿರ್ಣಯವನ್ನು ಸ್ವೀಕರಿಸಿತು.

ವಿಮಾನ ಕಾರ್ಖಾನೆ ನೌಕರರ ಹೋರಾಟವು ಒಂದು ರಾಷ್ಟ್ರೀಯ ಹೋರಾಟವಾಗಿದ್ದು, ಇದು ಕೊನೆಯದಾಗಿ ಸಾರ್ವಜನಿಕ ಕ್ಷೇತ್ರಕ್ಕೆ ಪರಿಣಾಮ ಬೀರುವಂತಹದಾಗಿದೆ. ಇವರ ಕೇಳಿಕೆಗಳನ್ನು ನ್ಯಾಯೋಚಿತವಾಗಿ ಇತ್ಯರ್ಥ ಮಾಡುವ ಬದಲು, ನೌಕರರನ್ನು ಕೆಲಸದಿಂದ ಕಿತ್ತೆಗೆದು ಲಾಕೌಟ್ ಮಾಡುವ ಹವ್ಯಾಸಕ್ಕೆ ಆಡಳಿತವರ್ಗ ಇಳಿದಿದೆ. ಅಲ್ಲದೆ ಸರಕಾರ ಶಾಂತಿಯುತ ಕಾರ್ಮಿಕರ ಮೆರವಣಿಗೆಯ ಮೇಲೆ ಕ್ರೂರವಾಗಿ ಗೋಳಿಬಾರು ಮಾಡಿದ-ಪರಿಣಾಮವಾಗಿ ಹಲವಾರು ಕಾರ್ಮಿಕರು ಘಾಯಗೊಂಡು, ಒಬ್ಬ ಕಾರ್ಮಿಕನು ಸಾವಿಗೆ ತುತ್ತಾಗಿದ್ದಾನೆ. ನಗರದ ಇತರ ಭಾಗಗಳಲ್ಲೂ ಸಿಕ್ಕಾಪಟ್ಟೆ ಲಾಠಿ ಛಾರ್ಜು ಮಾಡಲಾಗಿದೆ, ಎಂದು ಹೇಳುತ್ತಾ ಕಮಿಟಿಯು ಇದನ್ನು ಉಗ್ರವಾಗಿ ಖಂಡಿಸಿತು.

ಕಮಿಟಿಯು ತನ್ನ ನಿರ್ಣಯದಲ್ಲಿ, ಸರಕಾರವು ವಿಮಾನ ಕಾರ್ಖಾನೆ ನೌಕರರ ವಿವಾದದ ಮಧ್ಯೆ ಪ್ರವೇಶಿಸಿ ಅವರ ಕೇಳಿಕೆಗಳನ್ನು ಇತ್ಯರ್ಥ ಮಾಡಬೇಕು; ಸಸ್ಪೆನ್ಷನ್ ಹಾಗೂ ಡಿಸ್‌ಮಿಸ್‌ಆರ್ಡರನ್ನು ಹಿಂತೆಗೆದು ಈ ನೌಕರರಿಗೆ ಕೆಲಸ ಕೊಡಬೇಕು, ಲಾಕೌಟ್ ಎತ್ತಬೇಕು, ವಿಮಾನ ಕಾರ್ಖಾನೆ ಬಳಿ ಮತ್ತು ನಗರದಲ್ಲಿರುವ ನಿಷೇಧ ಆಜ್ಞೆಯನ್ನು ಹಿಂದೆಗೆಯಬೇಕು, ಮತ್ತು ಸತ್ತ ಕಾರ್ಮಿಕನ ಕುಟುಂಬಕ್ಕೆ ಸೂಕ್ತಪರಿಹಾರ ಕೊಡಬೇಕೆಂದು ಒತ್ತಾಯಿಸಿದೆ.

ಹಾಗೂ ಸುಮ್ಮಗೆ ಉದ್ರೇಕಗೊಳಿಸಲೆಂದೇ ಸುಮಾರು 100 ಜನರನ್ನು ದಸ್ತಗಿರಿ ಮಾಡಿದ್ದು, ಅವರಲ್ಲಿ ಪ್ರಾಂತ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಎನ್.ಎಲ್. ಉಪಾಧ್ಯಾಯರೂ ಒಬ್ಬರಾಗಿದ್ದಾರೆ. ಇವರೆಲ್ಲರನ್ನು ಕೂಡಲೇ ಬಿಟ್ಟು, ಗೋಳಿಬಾರ್ ಪ್ರಕರಣದ ಮೇಲೆ ಸಾರ್ವಜನಿಕ ವಿಚಾರಣೆಯಾಗಬೇಕೆಂದು ಸಮಿತಿಯು ಒತ್ತಾಯಿಸಿದೆ.

ಶಿವಮೊಗ್ಗ ಕಮ್ಯೂನಿಸ್ಟ್ ಕಾರ್ಯಕರ್ತರ ಸಭೆ

ತಾ. 1—3—58ರಂದು ಸಂಜೆ 8 ಗಂಟೆಗೆ ಕಮ್ಯೂನಿಸ್ಟ್‌ಪಾರ್ಟಿ ಕಾರ್ಯಕರ್ತರ ಸಭೆಯು ಪಾರ್ಟಿ ಕಾರ್ಯಾಲಯದಲ್ಲಿ ಸಮಾವೇಶಗೊಂಡಿತ್ತು.

ಸಭೆಯ ಪ್ರಾರಂಭದಲ್ಲಿ ಕೇಂದ್ರ ವಿದ್ಯಾಮಂತ್ರಿಗಳೂ ಮತ್ತು ಸ್ವತಂತ್ರ ಹೋರಾಟದಲ್ಲಿ ಪ್ರಮುಖ ಭಾಗಿಗಳಾಗಿದ್ದ ಆಜಾದ್‌ರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಮಂಗಳೂರಿನಲ್ಲಿ ನಡೆದ ಪ್ರಾಂತೀಯ ಸಮ್ಮೇಳನದಲ್ಲಾದ ತೀರ್ಮಾನಗಳನ್ನು ವಿಶದವಾಗಿ ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಿದ್ದ ಶ್ರೀಗಳಾದ ಕೆ. ಚಂದುಕುಟ್ಟಿನಾಯರ್ ಮತ್ತು ವಿ. ಬಸವರಾಜ್ ಇವರುಗಳು ಕಾರ್ಯಕರ್ತರಿಗೆ ತಿಳಿಸಿದರು.

(೬ನೇ ಪುಟ ನೋಡಿ)

ಸೋವಿಯತ್ ಪುಸ್ತಕಗಳ ಪ್ರದರ್ಶನ

ಬೆಂಗಳೂರಿನ ಭಾರತ-ರಷ್ಯಾ ಸಂಸ್ಕೃತಿ ಸಂಘ ಮತ್ತು ಭಾರತದಲ್ಲಿರುವ ಸೋವಿಯತ್ ವಾಣಿಜ್ಯ ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರು ನಗರದಲ್ಲಿ ಇದೇ ಮಾರ್ಚ್ ಒಂದು ಗಂಟೆ ರಿಂದ ಸೋವಿಯತ್ ಪುಸ್ತಕಗಳ ಪ್ರದರ್ಶನವು ನಗರದ ಟೌನ್ ಹಾಲ್ ಎದುರಿನಲ್ಲಿರುವ ವಿಶೇಷ ಚಪ್ಪರದಲ್ಲಿ ನಡೆಯುತ್ತಿದೆ.

ಮೈಸೂರು ವಿಧಾನ ಸಭೆಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಕಂಠಿಯವರು ಮಾರ್ಚ್ ೧ರಂದು ಸಂಜೆ ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಕಂಠಿಯವರು ಮಾತನಾಡುತ್ತಾ ಈ ಪ್ರದರ್ಶನವು ಬಹು ಉತ್ತಮವಾದುದೂ ಮತ್ತು ಶೈಕ್ಷಣಿಕವಾದುದೂ ಆಗಿದೆಯೆಂದು ತಿಳಿಸಿದರು.

ಭಾರತದಲ್ಲಿರುವ ಸೋವಿಯತ್ ವಾಣಿಜ್ಯ ಸಂಸ್ಥೆಯ ಪ್ರತಿನಿಧಿ ಮಿ. ಅಚಕೋವ್ಸ್ಕಿಯವರು ಸಭಿಕರನ್ನುದ್ದೇಶಿಸಿ ಮಾತನಾಡುತ್ತಾ ಪ್ರದರ್ಶನದ ಬಗ್ಗೆ ವಿವರವನ್ನಿತ್ತರು.


ಸಭಾಧ್ಯಕ್ಷತೆಯನ್ನು ಬೆಂಗಳೂರು ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಶ್ರೀ ವಿ. ಕೃಷ್ಣಮೂರ್ತಿಯವರು ವಹಿಸಿದ್ದರು, ಉಪಾಧ್ಯಕ್ಷರಾದ ಎಂ.ಎ ಎಚ್. ಸಿದ್ದಿಕಿಯವರು ವಂದನಾರ್ಪಣೆ ಮಾಡಿದರು.

* * * *

ಪ್ರದರ್ಶನವು ಈ ತಿಂಗಳ 16ನೇ ತಾರೀಖಿನವರೆಗೆ ನಡೆಯಲಿದೆ. ನಗರದ ಅನೇಕ ಮಂದಿ ಪ್ರದರ್ಶನಕ್ಕೆ ಭೇಟಿ ಇತ್ತು ತಮ್ಮ ಮೆಚ್ಚಿಗೆಯನ್ನು ಸೂಚಿಸಿದ್ದಾರೆ. ಸುಮಾರು 3500ಕ್ಕೂ ಮಿಕ್ಕ ಪುಸ್ತಕಗಳು ಪ್ರದರ್ಶಿಸಲ್ಪಟ್ಟಿವೆ. ಪುಸ್ತಕಗಳನ್ನು ಅಚ್ಚುಕಟ್ಟಾಗಿ ವಿಂಗಡಿಸಿ, ವಿವಿಧ ವಿಷಯಗಳನ್ನು ಕುರಿತ ಗ್ರಂಥಗಳನ್ನು ಬೇರ್ಪಡಿಸಿ ಜೋಡಿಸಲಾಗಿದೆ. ಭಾರತದ ಬಗ್ಗೆ ಮತ್ತು ಭಾರತೀಯ ಭಾಷೆಗಳಲ್ಲಿ ಪ್ರಕಟಗೊಂಡಿರುವ ಪುಸ್ತಕಗಳನ್ನು ಪ್ರತ್ಯೇಕವಾದ ಕಪಾಟ್‌ಗಳಲ್ಲಿರಿಸಲಾಗಿದೆ.



ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರು ಸೋವಿಯತ್ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸುತ್ತಿರುವುದು



ಶ್ರೀ ಎಸ್. ಆರ್. ಕಂಠಿಯವರು ಪ್ರದರ್ಶನವನ್ನು ವೀಕ್ಷಿಸುತ್ತಿರುವುದು

ಸೋವಿಯತ್ ಯೂನಿಯನ್‌ನಲ್ಲಿ ಪುಸ್ತಕಗಳನ್ನು, ವೃತ್ತಪತ್ರಿಕೆ, ಗ್ರಾಮೊಫೋನ್ ರಿಕಾರ್ಡ್‌ಗಳು, ಸ್ಟಾಂಪು ಇತ್ಯಾದಿಗಳನ್ನು ಹೊರದೇಶಕ್ಕೆ ರಫ್ತು ಮಾಡುವ ಸಂಸ್ಥೆ ಒಂದೇ ಒಂದು. ಅದರ ಹೆಸರು ಮೆಜ್ದುನರೊದ್ನಾಯಕ್ನಿಗ. ಪುಸ್ತಕಗಳ ಪ್ರಕಟಣೆಯಲ್ಲಿ ಸೋವಿಯತ್ ಯೂನಿಯನ್ ವಿಶ್ವದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. 1955ರಲ್ಲಿ ತಲಾ: ಅಂಶಗಳ ಪ್ರಕಾರ ಪುಸ್ತಕಗಳ ಪ್ರಕಟಣೆಯ ಸಂಖ್ಯೆಯು ಈ ಕೆಳಗಿನಂತಿವೆ.

ಸೋವಿಯತ್ ಯೂನಿಯನ್	30 811
ಜಪಾನ್	21,653
ಗ್ರೇಟ್‌ಬ್ರಿಟನ್	19,962
ಅಮೇರಿಕ	12,589
ಫ್ರಾನ್ಸ್	11,793

ವಿವಿಧ ಲೇಖಕರ ಕೃತಿಗಳು ವಿಶ್ವದ ನಾನಾ ಭಾಷೆಗಳಲ್ಲಿ ತರ್ಜುಮೆಯಾಗಿ ಪ್ರಕಟಗೊಂಡಿರುವುದರ ಬಗ್ಗೆ ವಿಶ್ವಸಂಸ್ಥೆಯವರು ಅಂಕಿ ಅಂಶಗಳನ್ನು ಸಂಗ್ರಹಿಸಿದ್ದಾರೆ. ಇದರಂತೆ ಮೊದಲನೆಯ ನಾಲ್ಕು ಸ್ಥಾನಗಳು ಸೋವಿಯತ್ ಯೂನಿಯನಿಗೆ ಲಭಿಸಿದೆ. ಸೋವಿಯತ್ ಯೂನಿಯನಿನಲ್ಲಿ ಇತರ ದೇಶಗಳ ಲೇಖಕರ ಕೃತಿಗಳು ಅಪಾರವಾಗಿ ಪ್ರಕಟಗೊಂಡಿವೆ. ಈ ಬಗ್ಗೆ ಅಂಕಿಅಂಶಗಳನ್ನು ಸಾರುವ ಪಟ್ಟಿಗಳು ಪ್ರದರ್ಶನದಲ್ಲಿವೆ.

ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಇಂಥ ಪ್ರದರ್ಶನ ನಡೆಯುತ್ತಿದೆ. ನಗರದ ಜನರು ಈ ಸದವಕಾಶವನ್ನು ಉಪಯೋಗಿಸಿ ಕೊಳ್ಳುವರೆಂದು ನಂಬುತ್ತೇವೆ.

ಕಂದಾಯ ಮಾಫಿಗೆ ಚಳುವಳಿ

ಗುಲ್ಬರ್ಗಾ ಜಿಲ್ಲೆಯ, ಚಿತಾಪುರ ತಾಲೂಕಿನಲ್ಲಿ ಸಸ್ಪೆಂಡ್ ಆದ ಕಂದಾಯವನ್ನು ಮಾಫಿ ಮಾಡಬೇಕೆಂಬ ಚಳುವಳಿ ಬಲಗೊಳ್ಳುತ್ತಿದೆ. ಕಮ್ಯೂನಿಸ್ಟ್ ಅಸೆಂಬ್ಲಿ ಸದಸ್ಯರಾದ ಎಂ. ಸಿ. ನರಸಿಂಹರವರು ಇದರ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಅಸೆಂಬ್ಲಿ ಅಧ್ಯಕ್ಷರಿಗೆ ಕೊಟ್ಟಿದ್ದರೂ ಅಧ್ಯಕ್ಷರು ಅದನ್ನು ತಳ್ಳಿಹಾಕಿರುತ್ತಾರೆ. ಆದರೆ ರಾಜ್ಯಪಾಲರ ಭಾಷಣದ ಮೇಲೆ ಮಾತಾಡುತ್ತಾ ಅವರು ಈ ವಿಷಯವನ್ನು ಒತ್ತಿಹೇಳಿ ಕಂದಾಯ ವಸೂಲಿಯಿಂದ ರೈತರಿಗೆ ತುಂಬಾ ಕಷ್ಟವಾಗುವುದಲ್ಲದೆ ಅನ್ಯಾಯವೆಂದು ಕೇಳಿದ್ದಾರೆ.

ತಾಲೂಕಿನಾದ್ಯಂತ ಈ ಬೇಡಿಕೆಗೆ ರೈತರ ಒತ್ತಾಯ ನಡೆಯುತ್ತಿದೆ.

ತಾ. ೨೩—೨—೫೮ರಂದು ಶ್ರೀ ಹನುಮಂತಪ್ಪಾ ಕೊಂಡಾ ಇವರ ಅಧ್ಯಕ್ಷತೆಯಲ್ಲಿ ಲಾಡ್ಲಾಪುರದಲ್ಲಿ ಜಾಹೀರ ಸಭೆ ನಡೆದು ಬಾಕಿ ಕಂದಾಯ ಮಾಫಿ ಮಾಡಬೇಕೆಂದೂ, ಜೋಳದ ದರವನ್ನು ರೂ. ೩೫ರಂತೆ ನಿಗದಿ ಮಾಡಬೇಕೆಂದೂ, ಗ್ರಾಮ ಪಂಚಾಯಿತಿಗೆ ಚುನಾವಣೆ ನಡಿಸಬೇಕೆಂದೂ ಠರಾವುಗಳನ್ನು ಮಾಡಿ ಸರಕಾರಕ್ಕೆ ಕಳಿಸಲಾಗಿದೆಂದು ಕಿಸಾನ್ ಸಭೆಯ ಕಾರ್ಯದರ್ಶಿ ದ್ಯಾವಣ್ಣ ಕೋರಬಾ ಅವರು ತಿಳಿಸಿದ್ದಾರೆ.

ಬಸಣ್ಣಾ ದುಗನೂರ ಇವರ ಅಧ್ಯಕ್ಷತೆಯಲ್ಲಿ ಚಿತ್ತಾಪುರದಲ್ಲಿ ನಡೆದ ಸಭೆಯಲ್ಲಿ ಶರಣಪ್ಪ ಭೈರಿ ಮುಂತಾದವರು ಮಾತನಾಡಿದರು. ಮೇಲಿನ ಬೇಡಿಕೆಗಳ ಬಗ್ಗೆ ಠರಾವುಗಳನ್ನು ಮಾಡಲಾಗಿದೆ.

ಸರಕಾರ ಇನ್ನಾದರೂ ಕಣ್ಣು ತೆರೆದು ನ್ಯಾಯ ದೊರಕಿಸಿಕೊಡುವುದೆಂದು ನಂಬಿದ್ದೇವೆ

ಪ್ರತಿಭಟನಾ ದಿನ

ಗುಲ್ಬರ್ಗಾ ಜಿಲ್ಲಾ ಪಿ. ಡಬ್ಲ್ಯು. ಡಿ. ಕೆಲಸಗಾರರ ಸಂಘವು ಇದೇ ಮಾರ್ಚ್ ೧೧ನ್ನು ಪ್ರತಿಭಟನಾ ದಿನವನ್ನಾಗಿ ಆಚರಿಸಬೇಕೆಂದು ತೀರ್ಮಾನಿಸಿದೆ. ನವಂಬರ 14, 1957ರಂದು ಮಂತ್ರಿಗಳಿಗೆ ಕೊಟ್ಟ ಮನವಿಯ ಬಗ್ಗೆ ಅವರು ಈ ವರೆಗೆ ಯಾವ ಕ್ರಮವನ್ನು ತೆಗೆದುಕೊಳ್ಳದಿದ್ದುದು ಕೆಲಸಗಾರರಲ್ಲಿ ಅತೃಪ್ತಿ ಬೆಳೆಯುತ್ತಿರುವುದರಿಂದ ಅದನ್ನು ಸರಕಾರದ ಗಮನಕ್ಕೆ ತರಲು ಪ್ರತಿಭಟನಾ ದಿನವನ್ನಾಚರಿಸಬೇಕೆಂದು ಸಂಘದ ಕಾರ್ಯಕಾರೀ ಸಮಿತಿಯು ತೀರ್ಮಾನಿಸಿದೆ.

ವಿಶಾಲವಾದ ಕಮ್ಯೂನಿಸ್ಟ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದ್ವಿತೀಯ ಯೋಜನೆಯ ಬಿಕ್ಕಟ್ಟು

ಈ ಮೊದಲು ವಿವರಿಸಿದ ಪರಿಸ್ಥಿತಿಯ ಜೊತೆಯಲ್ಲೆ ದ್ವಿತೀಯ ಪಂಚವಾರ್ಷಿಕ ಯೋಜನೆಯು ಗಂಭೀರವಾದ ಬಿಕ್ಕಟ್ಟಿಗೆ ಸಿಲುಕಿಕೊಂಡಿದೆ ಸ್ವಲ್ಪಮಟ್ಟಿಗೆ ಈ ಅಡಚಣೆಗಳು ಮನುಷ್ಯ ನಿಯಂತ್ರಣಕ್ಕೆ ಹೊರತಾದುವು. ಆದರೆ ಮೂಲಭೂತವಾಗಿ, ಬಿಕ್ಕಟ್ಟಿನ ಕಾರಣಗಳು ಯೋಜನೆಯೊಳಗೆನೇ ಸೇರಿಕೊಂಡಿವೆ. ನಮ್ಮ ಪಾರ್ಟಿಯು ಯೋಜನೆಯ ಉದ್ದೇಶಗಳಿಗೂ ಗುರಿಗಳಿಗೂ ಬೆಂಬಲ ಕೊಡುತ್ತದೆ. ಕೈಗಾರಿಕೆಗಳಿಗೆ ಪ್ರಾಮುಖ್ಯತೆ ಕೊಟ್ಟಿರುವುದು ಹಾಗು ಸಾರ್ವಜನಿಕ ಕ್ಷೇತ್ರವನ್ನು ವಿಸ್ತರಿಸುವುದು ಸ್ವಾಗತಾರ್ಹವಿದ. ಆದೇ ಸಮಯದಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವ ಕ್ರಮವು ಅದರ ಉದ್ದೇಶಗಳಿಗೆ ವಿರೋಧವಾಗಿದೆ. ಯೋಜನೆಯ ಉದ್ದೇಶ ಹಾಗು ಕಾರ್ಯಗತಗೊಳಿಸುವ ಕ್ರಮದ ಪರಸ್ಪರ ವಿರೋಧವನ್ನು ನಿವಾರಿಸುವಂತೆ ಸರಕಾರದ ಧೋರಣೆಗಳು ಬದಲಾವಣೆ, ಹೊಂದದಿದ್ದರೆ ಯೋಜನೆಯು ಅನಿವಾರ್ಯವಾಗಿ ಬಿಕ್ಕಟ್ಟಿಗೆ ಸಿಲುಕುವುದೆಂದು ನಮ್ಮ ಪಾರ್ಟಿ ಎಚ್ಚರಿಕೆ ಕೊಟ್ಟಿದೆ. ನಮ್ಮ ಈ ಎಚ್ಚರಿಕೆಗೆ ಸರಕಾರ ಗಮನ ಕೊಡಲಿಲ್ಲ.

ಈವತ್ತು, ಯೋಜನೆಯ ಬಿಕ್ಕಟ್ಟಿನ ಬಗ್ಗೆ ವಿವಾದವಿಲ್ಲ. ಯೋಜನೆಯೊಳಗಿನ ಅನೇಕ ಉದ್ಯಮಗಳನ್ನು ಕೈ ಬಿಡಲಾಗುತ್ತಿದೆ. ವಿದೇಶ ನಾಣ್ಯಗಳ ಪಟ್ಟಿಗೆ ತೀವ್ರ ಮುಗ್ಗಟ್ಟು ಉಂಟಾಗಿದೆ. ಆಂತರಿಕ ಸಾಧನ ಸಂಪತ್ತುಗಳ ಪೂರೈಕೆಯು ಅಂದಾಜಿಗಿಂತ ಬಹಳ ಹಿಂದೆ ಉಳಿದಿದೆ. ಕ್ರಯಗಳು ಏರುತ್ತಿವೆ. ಹಣದ ಉಬ್ಬರ ಉಂಟಾಗಲಾರದೆಂದು ಭರವಸೆ ಕೊಟ್ಟಿರುವುದೆಲ್ಲ ಸುಳ್ಳಾಗಿವೆ. ಆಹಾರದ ಪರಿಸ್ಥಿತಿಯು ಹದಗೆಟ್ಟು ಲಕ್ಷಾಂತರ ಜನ ಉಪವಾಸಕ್ಕೆ ಬಲಿಯಾಗಿದ್ದಾರೆ. ಇದು ಎಲ್ಲರಿಗೂ ತಿಳಿದಿರುವ ವಿಚಾರ.

ಪ್ರತಿಗಾಮಿಗಳ ಧಾಳಿ

ಎಲ್ಲದಕ್ಕಿಂತ ಚಿಂತಾಜನಕವಾದುದು ಪ್ರತಿಗಾಮಿಗಳ ಧಾಳಿ. ದೇಶೀಯ ಹಾಗು ವಿದೇಶೀ ಪ್ರತಿಗಾಮಿ ವೃತ್ತಗಳು, ಕಾಂಗ್ರೆಸಿನೊಳಗೂ ಹೊರಗೂ ಇರುವ ಭೂಮಾಲಕರ ಮತ್ತು ಬಂಡವಾಳಗಾರರ ಪ್ರತಿನಿಧಿಗಳು, ನಡೆಸುತ್ತಿರುವ ಚಟುವಟಿಕೆಗಳು ಅಪಾಯಕಾರಿಯಾಗಿವೆ. ಈ ಪ್ರತಿಗಾಮಿ ವೃತ್ತಗಳು ಇಂದಿನ ಪರಿಸ್ಥಿತಿಯ ಆರ್ಥಿಕ ಅಂಶಗಳಿಂದ ಆತುರಗೊಂಡಿವೆ ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಾಗಿ ರಾಜಕೀಯ ಅಂಶದಿಂದ – ಅಂದರೆ ಕಮ್ಯೂನಿಸ್ಟ್ ಪಾರ್ಟಿಯೂ ಪ್ರಜಾ ಪ್ರಭುತ್ವ ಶಕ್ತಿಗಳೂ ಬಲ ಹೊಂದುತ್ತಿರುವುದರಿಂದ — ಗಾಬರಿ ಹೊಂದಿವೆ. ಯೋಜನೆಯನ್ನು ಇದಿರಿಸುತ್ತಿರುವ ಅಡಚಣೆಗಳನ್ನು ಉಪಯೋಗಿಸಿಕೊಂಡು, ರಾಷ್ಟ್ರ ವಿರೋಧಿ ಧೋರಣೆಗಳನ್ನು ಅನುಸರಿಸುವಂತೆ ಪ್ರತಿಗಾಮಿಗಳು ಸರಕಾರವನ್ನು ಒತ್ತಾಯ ಮಾಡುತ್ತಿವೆ. ಟಿ. ಟಿ. ಕೃಷ್ಣಮಾಚಾರಿಯವರು 'ನ್ಯೂಯೋರ್ಕ್ ಟೈಮ್ಸ್' ಪತ್ರಿಕೆಗೆ ಕೊಟ್ಟಿದ್ದ ಹೇಳಿಕೆಯು ಇದಕ್ಕೊಂದು ನಿದರ್ಶನವಾಗಿದೆ.

ವಿದೇಶಗಳಿಂದ ಸಹಾಯ ದೊರಕದೆ ಯೋಜನೆಯನ್ನು ಯಶಸ್ವಿಗೊಳಿಸಲು ಸಾಧ್ಯವಿಲ್ಲ ಎಂಬ ಕಾರಣ ತೋರಿಸಿ, ವಿದೇಶಗಳ ಸಹಾಯದ ಸಲುವಾಗಿ ವಿದೇಶ ಧೋರಣೆಯನ್ನು ಬದಲಾಯಿಸಬೇಕೆಂದು ಪ್ರತಿಗಾಮಿಗಳು ಒತ್ತಾಯ ಮಾಡುತ್ತವೆ. ವಿದೇಶ ಬಂಡವಾಳ ಒಳಗೆ ಹರಿದು ಬರುವುದಕ್ಕೆ ಅನುಕೂಲವಾದ ವಾತಾವರಣ ಸೃಷ್ಟಿಸಬೇಕೆಂದು ನಿರ್ಬಂಧಿಸುತ್ತವೆ. ಯೋಜನೆಯ ಗುರಿಗಳನ್ನು ಕಡಿತ ಮಾಡಬೇಕೆಂದು ವಾದಿಸುತ್ತವೆ. ಸಾರ್ವಜನಿಕ ಕ್ಷೇತ್ರವನ್ನು ಕತ್ತರಿಸಿ ದೊಡ್ಡ ಬಂಡವಾಳಗಾರರಿಗೆ ಸರ್ವ ಸ್ವಾತಂತ್ರ್ಯ ಕೊಡಬೇಕೆಂದು ಕೇಳುತ್ತವೆ. ವ್ಯಾವಸಾಯಿಕ ಉತ್ಪಾದನೆ ಹೆಚ್ಚಿಸುವುದಕ್ಕೆ ಜಮೀನು ಹಿಡುವಳಿಯ ಮೇಲೆ ಪರಿಮಿತಿ ಹೊರಿಸುವುದನ್ನು ಬಿಟ್ಟುಬಿಡಬೇಕೆನ್ನುತ್ತವೆ. ಪ್ರತಿಗಾಮಿ ವೃತ್ತಗಳು ಬಹಿರಂಗವಾಗಿ ಇಂಥ ಘೋಷಣೆಗಳನ್ನು ಕೂಗುತ್ತಿವೆ; ಆಳುವ ಪಕ್ಷದೊಳಗೆ ಅವುಗಳ ಬೆಂಬಲಿಗರು ಇದೇ ವಿಚಾರಗಳನ್ನು ಸುತ್ತು ಬಳಸಿ ನಾಜೂಕಾಗಿ ಎತ್ತಿ ಹಿಡಿಯುತ್ತಿದ್ದಾರೆ.

ಇದರ ಜೊತೆಯಲ್ಲೆ ಕಮ್ಯೂನಿಸ್ಟ್ ಪಾರ್ಟಿಯ ಮತ್ತು ಕೇರಳದ ಕಮ್ಯೂನಿಸ್ಟ್ ಸರಕಾರದ ವಿರೋಧವಾಗಿ ಅಪಪ್ರಚಾರ, ಸುಳ್ಳುಗಳ ಸುರಿಮಳೆ ಹಾಗು ಗಲಭೆ ಎಬ್ಬಿಸಲಾಗುತ್ತಿದೆ. ಕೇಂದ್ರ ಮಂತ್ರಿ ಮಂಡಲದ ಕೆಲವು ಸದಸ್ಯರು ಕೂಡ, ಘಟನಾತ್ಮಕ ಕ್ರಮಗಳನ್ನು ಕಡೆಗಾಣಿಸಿ, ಈ ಅನ್ಯಾಯಕ್ಕೆ ಬೆಂಬಲ ನೀಡುತ್ತಾರೆ. ಕೇರಳ ಸರಕಾರವನ್ನು ಕಷ್ಟಕ್ಕೆ ಗುರಿ ಮಾಡಲು ಎಲ್ಲಾ ರೀತಿಯ ಪ್ರಯತ್ನ ನಡೆಯುತ್ತಿದೆ. ಕಾನೂನು ಮತ್ತು ಶಾಂತಿ ರಕ್ಷಣೆಯ ಹೆಸರಲ್ಲಿ ಕೇರಳ ಸರಕಾರದ ವಿರೋಧ ವರ್ತಿಸಲು ಕೇಂದ್ರ ಸರಕಾರವನ್ನು ಒತ್ತಾಯ ಮಾಡಲಾಗುತ್ತಿದೆ.

ನಮ್ಮ ವಿದೇಶ ಧೋರಣೆಗೆ ವಿರೋಧವಾದ ಚಳುವಳಿ, ಎರಡನೆ ಪಂಚವಾರ್ಷಿಕ ಯೋಜನೆಯ ಪ್ರಗತಿಶೀಲ ಅಂಶಗಳ ವಿರೋಧವಾದ ಕೂಗು, ಕೇರಳ ಸರಕಾರಕ್ಕೆ ವಿರೋಧವಾದ ಗಲಭೆ - ಇವೆಲ್ಲ ಒಂದಕ್ಕೊಂದು ಸಂಬಂಧವಿಲ್ಲದವುಗಳಲ್ಲ. ಈ ಬೇರೆ ಬೇರೆ ಚಳುವಳಿಗಳಲ್ಲಿ ಭಾಗವಹಿಸುವ ಎಲ್ಲರ ಉದ್ದೇಶವೂ ಒಂದೇ ಅಲ್ಲ, ನಿಜ. ಅವರೆಲ್ಲ ಒಂದೇ ಒಕ್ಕೂಟಕ್ಕೆ ಸೇರಿದವರೂ ಅಲ್ಲ. ಅವರಲ್ಲಿ ತೀವ್ರ ಪ್ರತಿಗಾಮಿಗಳಿದ್ದಾರೆ; ಅತೃಪ್ತರಾದ ರಾಜಕೀಯ ಮುಂದಾಳುಗಳಿದ್ದಾರೆ; ಸ್ವಾರ್ಥ ಸಾಧಕರಿದ್ದಾರೆ; ದಾರಿ ತಪ್ಪಿದ ಮಂದಿಯೂ ಇದ್ದಾರೆ. ಆದರೆ ಈ ಚಳುವಳಿಗೆ ಪ್ರಚೋದನೆ ನೀಡುವ ಶಕ್ತಿಗಳು, ಈ ಚಳುವಳಿಗಳಿಂದ ಲಾಭ ಪಡೆಯುವ ವರ್ಗಗಳು ಸಾಮ್ರಾಜ್ಯಶಾಹಿ, ಭೂಮಾಲಕ, ರಾಷ್ಟ್ರದ್ರೋಹಿ ದೊಡ್ಡ ಗುತ್ತೇದಾರ ಬಂಡವಾಳಗಾರ, ಅತ್ಯಂತ ಪ್ರತಿಗಾಮಿ ವೃತ್ತಗಳು; ಜನತೆಗೆ ಹೆದರುವ, ಪ್ರಜಾ ಪ್ರಭುತ್ವವನ್ನು ದ್ವೇಷಿಸುವ ವರ್ಗಗಳು.

ಈ ಪ್ರತಿಗಾಮಿ ವರ್ಗಗಳ ಕೈ ಮೇಲಾದರೆ, ಅವರ ಕಾರ್ಯಕ್ರಮ ಜಯ ಹೊಂದಿದರೆ, ಅದರ ಪರಿಣಾಮ ಅತ್ಯಂತ ಗಂಭೀರವಾಗುವುದು. ನಮ್ಮ ಸ್ವಾತಂತ್ರ್ಯವು ಬರೇ ನಕಲಿ ಸ್ವಾತಂತ್ರ್ಯವಾಗುವುದು. ನಮ್ಮ ಆರ್ಥಿಕ ಸ್ಥಿತಿಯು ತೀರ ಹಿಂದುಳಿಯುವುದು. ಜನರ ಸ್ಥಿತಿ ಹದಗೆಡುವುದು. ಪ್ರಜಾ ಪ್ರಭುತ್ವವು ತೀವ್ರ ಧಾಳಿಗೆ ಗುರಿಯಾಗುವುದು.

ಆದುದರಿಂದ ಈ ಪ್ರತಿಗಾಮಿ ಶಕ್ತಿಗಳ ವಿರೋಧವಾಗಿ ಒಂದುಗೂಡುವುದು, ಅವನ್ನು ಬಯಲಿಗೆ ಎಳೆಯುವುದು, ಅವು ದೇಶದ ಮೇಲೆ ಹೇರಲು ಯತ್ನಿಸುತ್ತಿರುವ ಧೋರಣೆಗಳನ್ನು ಪ್ರತಿಭಟಿಸುವುದು, ಪ್ರತಿಯೊಬ್ಬ ದೇಶಪ್ರೇಮಿಯ ಪಕ್ಷ ಭೇದವಿಲ್ಲದ ಕರ್ತವ್ಯವಾಗಿದೆ. ಇಂಥ ಐಕ್ಯತೆಯನ್ನು ಸಾಧಿಸಲು ನಮ್ಮ ಪಾರ್ಟಿ ಪ್ರಾಮುಖ್ಯ ಪಾತ್ರ ವಹಿಸಬೇಕು. ಪಾರ್ಟಿಯು ಗಳಿಸಿರುವ ಬಲದಿಂದ, ಇಂದು ನಾವು ಈ ಪಾತ್ರವನ್ನು ಹಿಂದೆ ಎಂದಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯು ಸೋತು ಹೋದರೆ ಕಾಂಗ್ರೆಸಿನ ಗೌರವ ಕಡಿಮೆಯಾಗುವುದೆಂದೂ ಕಮ್ಯೂನಿಸ್ಟ್ ಪಾರ್ಟಿಯು ಅಧಿಕಾರ ಕಸಿದುಕೊಳ್ಳಬಹುದೆಂದೂ ಎಣಿಸಿ ನಾವು ಯೋಜನೆಯನ್ನು ವಿರೋಧಿಸುತ್ತಿದ್ದೇವೆ ಎಂದು ಪ್ರತಿಗಾಮಿಗಳು ಹೇಳುತ್ತಾರೆ. ಈ ಮಾತು, ಯುದ್ಧದಿಂದ ಕ್ರಾಂತಿಗೆ ಅನುಕೂಲವಾಗುವುದೆಂಬ ಕಾರಣದಿಂದ ಕಮ್ಯೂನಿಸ್ಟರು ಯುದ್ಧವನ್ನು ಅಪೇಕ್ಷಿಸುತ್ತಾರೆ ಎಂದು ಹಿಂದೆ ಸಾಮ್ರಾಜ್ಯಶಾಹಿಗಳು ಹೇಳುತ್ತಿದ್ದ ಮಾತಿನಂತಿದೆ. ಈ ಮಾತುಗಳಲ್ಲಿ ಸತ್ಯದ ಒಂದು ತುಣುಕು ಕೂಡ ಇಲ್ಲ. ಆದರೆ ಇಂಥ ಪ್ರಚಾರವನ್ನು ಅನೇಕ ಮಂದಿ ನಿಜವೆಂದು ನಂಬುತ್ತಾರೆ. ಈ ಪ್ರಚಾರವನ್ನು ವಿರೋಧಿಸಲು ನಾವು ಹೆಚ್ಚೇನೂ ಮಾಡಿರುವುದಿಲ್ಲ. ಈ ವಿಚಾರದಲ್ಲಿ ನಮ್ಮ ಪ್ರಚಾರ, ಚಳುವಳಿ ಹಾಗು ಪ್ರಾಯೋಗಿಕ ಚಟುವಟಿಕೆ ಎಷ್ಟೋ ಉತ್ತಮವಾಗಬೇಕು.

ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಕುರಿತು ನಮ್ಮ ಪಾರ್ಟಿಯ ವಿಮರ್ಶೆಯಲ್ಲಿ ಏನೇನೂ ಗುಟ್ಟಿಲ್ಲ. ನಮ್ಮ ವಿಮರ್ಶೆ ಸರಿಯೆಂದು ಈವರೆಗಿನ ಅನುಭವದಿಂದಲೇ ಖಂಡಿತವಾಗಿದೆ. ಆದರೆ ಇಂದು, ಆ ವಿಮರ್ಶೆಗಳನ್ನು ತಿರುಗಿ ತಿರುಗಿ ಹೇಳುವುದರಿಂದ ನಾವು ತೃಪ್ತಿ ಹೊಂದಬಾರದು. ಕೈಗಾರಿಕೆಗಳಿಗೆ ಪ್ರಾಮುಖ್ಯತೆ ಕೊಡುವ ಮತ್ತು ಸಾರ್ವಜನಿಕ ಕ್ಷೇತ್ರವನ್ನು ವಿಸ್ತರಿಸುವ ಅಂಶಗಳ ವಿರೋಧವಾಗಿ ಪ್ರತಿಗಾಮಿಗಳು ನಡೆಸುತ್ತಿರುವ ಧಾಳಿಯನ್ನು ಪ್ರತಿಭಟಿಸಬೇಕು. ವಿದೇಶ ಧೋರಣೆಯನ್ನು ಪ್ರತಿಗಾಮಿ ದಿಕ್ಕಿಗೆ ತಿರುಗಿಸುವ ಪ್ರಯತ್ನವನ್ನು ತಡೆಗಟ್ಟಬೇಕು. ರಾಷ್ಟ್ರೀಯ ಹಿತಕ್ಕೆ ಧಕ್ಕೆಯಾಗುವ ಶರತಗಳಲ್ಲಿ ವಿದೇಶಿ ಬಂಡವಾಳವನ್ನು ಆಮಂತ್ರಿಸುವ ಕ್ರಮವನ್ನು ಕೊನೆಗಾಣಿಸಬೇಕು. ಅದೇ ಸಮಯದಲ್ಲಿ "ಯೋಜನೆಯ ತಿರುಳು" ಉಳಿಸುವ ನೆಪದಲ್ಲಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳನ್ನು ಕಡಿತ ಮಾಡದಂತೆ ನೋಡಿಕೊಳ್ಳಬೇಕು. ಜನರ ಜೀವನ ಮಟ್ಟದ ಮೇಲಾಗುವ ಧಾಳಿಯನ್ನು ಪ್ರತಿಭಟಿಸಬೇಕು. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಜನಜೀವನ ಉತ್ತಮವಾಗುವ ರೀತಿಯಲ್ಲಿ ರಾಷ್ಟ್ರೀಯ ಪುನರ್ರಚನೆ ಮುಂದೆ ಸಾಗುವಂತೆ ಮಾಡಬೇಕು. ಇದು ನಮ್ಮ ಕರ್ತವ್ಯ.

ರಾಷ್ಟ್ರೀಯ ಕಾರ್ಯಕ್ರಮ

ಈ ಕರ್ತವ್ಯವನ್ನು ನೆರವೇರಿಸುವ ಹೋರಾಟದಲ್ಲಿ ನಮ್ಮ ಪಾರ್ಟಿಯು ನಮ್ಮ ಜನತೆಯ ದೇಶಪ್ರೇಮ ಹಾಗು ಪ್ರಜಾಪ್ರಭುತ್ವ ಆಕಾಂಕ್ಷೆಗಳ ಮೇಲೆ ಭರವಸೆ ಇಟ್ಟಿರುತ್ತದೆ; ಸರ್ವತೋಮುಖವಾದ ರಾಷ್ಟ್ರೀಯ ಪುರೋಗಮನದ ಅಭಿಲಾಷೆಯ ಮೇಲೆ ನಂಬಿಕೆ ಇಟ್ಟಿರುತ್ತದೆ.

ಜನತೆಯ ಬೆಂಬಲವನ್ನು ಅಪೇಕ್ಷಿಸುವ ಪ್ರತಿಯೊಂದು ಪಕ್ಷವೂ ಇಂದು ಸಮಾಜವಾದದ ನೆಲೆಯಲ್ಲಿ ಮಾತಾಡುತ್ತಿವೆ. ಸಮಾಜವಾದೀ ಜಗತ್ತಿನ ಪ್ರಚಂಡ ಸಾಧನೆಗಳು ಹಾಗು ಸಮಾಜವಾದೀ ಭಾವನೆಗಳು ನಮ್ಮ ಜನತೆಯ ಮೇಲೆ ಎಷ್ಟೊಂದು ಪ್ರಭಾವ ಬೀರಿವೆ ಎಂದು ಅದು ವ್ಯಕ್ತಪಡಿಸುತ್ತದೆ. ನಮ್ಮ ಜನರಲ್ಲಿ ಪ್ರಗತಿಶೀಲ ವಿಚಾರ ಬೆಳೆದಿದೆ ಎನ್ನುವುದಕ್ಕೆ ಅದು ನಿದರ್ಶನವಾಗಿದೆ. ಆದರೆ ಇಷ್ಟರಿಂದಲೆ ಇಂದಿನ ಸ್ಥಿತಿಯು ಸಮಾಜವಾದಿ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಸಾಕಷ್ಟು ಹದವಾಗಿದೆಯೆಂದು ಮಾರ್ಕ್ಸ್‌ವಾದಿ – ಲೆನಿನ್‌ವಾದಿ ಪಕ್ಷವಾದ ಕಮ್ಯೂನಿಸ್ಟ್ ಪಾರ್ಟಿಯು ತಿಳಿದುಕೊಳ್ಳಬಾರದು. ಕಾರ್ಮಿಕ ವರ್ಗದ ದೊಡ್ಡ ಭಾಗದಲ್ಲೂ ಜನತೆಯ ಮುಂದಣ ವಿಭಾಗಗಳಲ್ಲೂ ನಿಜವಾದ ಸಮಾಜವಾದೀ ಜಾಗೃತಿ ಇನ್ನೂ ಹುಟ್ಟಿಸಬೇಕಾಗಿದೆ. ತಾತ್ವಿಕ ಕ್ಷೇತ್ರದಲ್ಲಿ ಅದು ಮುಖ್ಯವಾದ ಒಂದು ಕರ್ತವ್ಯವಾಗಿದೆ. ಮಾರ್ಕ್ಸಿಸಂ-ಲೆನಿನಿಸಮಿನ ತತ್ವಗಳನ್ನು ಸಾಮೂಹಿಕವಾಗಿ ಪ್ರಚಾರ ಮಾಡಬೇಕು. ಬಂಡವಾಳಶಾಹಿಯು ಹರಡುತ್ತಿರುವ ನಕಲಿ ಸಮಾಜವಾದದ ಹರಕು – ಮುರುಕು ಭಾವನೆಗಳ ವಿರೋಧ ಹೋರಾಡಬೇಕು. ಸಮಾಜವಾದ ಎಂದರೆ ಏನೆಂದು ಜನತೆ ತಿಳಿದುಕೊಂಡಿದೆ? ಸಮಾಜವಾದದಿಂದ ಜನರು ಅಪೇಕ್ಷೆ ಪಡುವುದು ಏನು? ಇದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ನಮ್ಮ ಪ್ರಾಯೋಗಿಕ ಘೋಷಣೆಗಳು, ಪ್ರಾಯೋಗಿಕ ಚಟುವಟಿ

ಪಾರ್ಟಿಯನ್ನು ಕಟ್ಟಲು ಕರೆ

ಅಜಯ ಘೋಷ್

ಕೆಗಳು, ಅದನ್ನು ಹೊಂದಿಕೊಂಡಿರಬೇಕು. ಒಟ್ಟಿನಲ್ಲಿ ಹೇಳುವುದಿದ್ದರೆ, ಸಮಾಜವಾದ ಎಂದರೆ ಹೆಚ್ಚು ಪೂರ್ಣವಾದ ಪ್ರಜಾಪ್ರಭುತ್ವವೆಂದು ನಮ್ಮ ಜನತೆ ತಿಳಿದುಕೊಂಡಿದೆ. ಸಮಾಜವಾದದಿಂದ ನಮ್ಮ ಜನ ಅಪೇಕ್ಷಿಸುವುದು:

ಸಾರ್ವಜನಿಕ ಕ್ಷೇತ್ರದ ವಿಸ್ತರಣೆ; ಆರ್ಥಿಕ ಕ್ಷೇತ್ರದಲ್ಲಿ ಬಹಳ ಮುಖ್ಯವಾದ ಕೆಲವು ಅಂಗಗಳ ರಾಷ್ಟ್ರೀಕರಣ; ಗುತ್ತೇದಾರಿಯ ಮೇಲೆ ಹತೋಟಿ; ಪ್ರಗತಿಶೀಲ ಭೂಸುಧಾರಣೆ; ಉಳುವವನಿಗೆ ಜಮೀನು; ಆದಾಯದ ವ್ಯತ್ಯಾಸವನ್ನು ಕಡಿಮೆ ಮಾಡುವುದು; ಕಾರ್ಮಿಕರು ಉತ್ಪಾದನೆ ಮಾಡುವ ಸಂಪತ್ತಿನಲ್ಲಿ ಅವರಿಗೆ ನ್ಯಾಯವಾದ ಭಾಗ; ನೌಕರರಿಗೆ, ಅಧ್ಯಾಪಕರಿಗೆ ಮತ್ತಿತರ ಅಲ್ಪ ವೇತನವುಳ್ಳವರಿಗೆ ಯೋಗ್ಯ ವೇತನ; ಶ್ರೀಮಂತರ ಮೇಲೆ ಹೆಚ್ಚಿನ ಹೊರೆ ಬೀಳುವಂಥ ನ್ಯಾಯವಾದ ತೆರಿಗೆಯ ವ್ಯವಸ್ಥೆ; ನಿರುದ್ಯೋಗ ನಿವಾರಣೆಗೆ ಕ್ರಮ; ಪೋಲೀಸು ಖಾತೆ ಹಾಗು ನೌಕರಶಾಹಿಯ ಅಧಿಕಾರಗಳನ್ನು ಕಡಿಮೆ ಮಾಡುವುದು; ಜನರಿಗೆ ಹೆಚ್ಚು ಪ್ರಜಾಪ್ರಭುತ್ವ ಹಕ್ಕುಗಳನ್ನೂ ಸ್ವಾತಂತ್ರ್ಯಗಳನ್ನೂ ನೀಡುವುದು; ಆರೋಗ್ಯ, ವಸತಿ, ವಿದ್ಯಾಭ್ಯಾಸ ಮುಂತಾದವುಗಳ ಬಗ್ಗೆ ಸರಕಾರ ಹೆಚ್ಚು ಆಸಕ್ತಿ ವಹಿಸುವುದು; ಅಸ್ಪೃಶ್ಯತೆ ನಿವಾರಣೆ ಮಾಡುವುದು; ಸ್ತ್ರೀಯರಿಗೆ ಸಮಾನ ಹಕ್ಕು ಕೊಡುವುದು; ಗುಡ್ಡಗಾಡು ಜನರ ಮತ್ತಿತರ ಮರ್ದಿತ ಜನರ ಸ್ಥಿತಿಯನ್ನು ಉತ್ತಮಗೊಳಿಸುವುದು.

ಅಪೂರ್ಣವಾದ ಪ್ರಜಾಪ್ರಭುತ್ವ ಕ್ರಾಂತಿಯ ಕರ್ತವ್ಯಗಳು ಜನತೆಯ ಈ ಆಕಾಂಕ್ಷೆಗಳಲ್ಲಿ ಪ್ರತಿಬಿಂಬಿತವಾಗುತ್ತಿವೆ. ಆದುದರಿಂದ ನಮ್ಮ ಕ್ರಾಂತಿಯ ಇಂದಿನ ಘಟ್ಟದ ಕರ್ತವ್ಯಗಳನ್ನು ಪೂರ್ತಿಗೊಳಿಸಿ, ಸಮಾಜವಾದಕ್ಕೆ ಪರಿವರ್ತನೆ ಹೊಂದಲು ಬುನಾದಿ ಸೃಷ್ಟಿಸುವುದಕ್ಕೆ ನಮ್ಮ ಪಾರ್ಟಿಯು ಪ್ರಜಾಪ್ರಭುತ್ವವಾದೀ ಸುಧಾರಣೆಗಳ ಬಗ್ಗೆ ಜನತೆಯನ್ನು ಐಕ್ಯಗೊಳಿಸಬೇಕು.

ಪಾರ್ಟಿಯು ಜನತೆಯ ಈ ಆಕಾಂಕ್ಷೆಗಳ ತಳಹದಿಯಲ್ಲಿ ತನ್ನ ಪ್ರಾಯೋಗಿಕ ಚಟುವಟಿಕೆಗಳನ್ನು ನಡೆಸತಕ್ಕದ್ದು, ಕಾರ್ಯಾಚರಣೆಗೆ ತಕ್ಷಣದ ಘೋಷಣೆಗಳನ್ನು ತಯಾರಿಸಿ ಈ ಆಕಾಂಕ್ಷೆಗಳಿಗೆ ನಿರ್ದಿಷ್ಟ ಸ್ವರೂಪ ಕೊಡಬೇಕು. ಅಂಥ ಘೋಷಣೆಗಳನ್ನು ಸಾಧಿಸಲು ಜನತೆಯನ್ನು ಕಾರ್ಯರಂಗಕ್ಕೆ ಇಳಿಸಬೇಕು. ಇಂದಿನ ಸಾಧ್ಯತೆಗಳನ್ನೆಲ್ಲ ಸಂಪೂರ್ಣವಾಗಿ ವಿನಿಯೋಗಿಸಲು, ಹೊಸ ಸಾಧ್ಯತೆಗಳನ್ನು ಉಂಟುಮಾಡಲು, ಪಾರ್ಟಿಯು ಸಹನೆಯಿಂದಲೂ ಬಹಳ ಕಷ್ಟಪಟ್ಟೂ ದುಡಿಯಬೇಕು. ಜನರ ಕೇಳಿಕೆಗಳನ್ನು ಪಡೆಯುವ, ಆಕಾಂಕ್ಷೆಗಳನ್ನು ಈಡೇರಿಸುವ, ದಾರಿಯಲ್ಲಿ ಜನತೆಯನ್ನು ಮುನ್ನಡೆಸಬೇಕು.

ಆಂತರಿಕ ಸಮಸ್ಯೆಗಳನ್ನು ಕುರಿತು ಚಳುವಳಿ ನಡೆಸುವಾಗಲೇ, ದೇಶದ ಪರಿಸ್ಥಿತಿಯೊಡನೆ ನೇರವಾಗಿ ಸಂಬಂಧವಿರುವ ಅಂತರರಾಷ್ಟ್ರೀಯ ವಿಚಾರಗಳನ್ನು ನಾವು ಎಷ್ಟು ಮಾತ್ರಕ್ಕೂ ಕಡೆಗಾಣಿಸಬಾರದು,

ಶಾಂತಿಯನ್ನು ರಕ್ಷಿಸುವುದರಿಂದ, ಸಮಾಜವಾದಿ ರಾಷ್ಟ್ರಗಳೊಡನೆ ಸ್ನೇಹ ಸಂಬಂಧವನ್ನು ಬಲಪಡಿಸುವುದರಿಂದ, ಏಷ್ಯಾ ರಾಷ್ಟ್ರಗಳ ಐಕ್ಯತೆಯನ್ನು ಬೆಳೆಸುವುದರಿಂದ ನಮ್ಮ ದೇಶದ ಸ್ವಾತಂತ್ರ್ಯ ಬಲ ಹೊಂದುತ್ತದೆ. ಆದುದರಿಂದ ಅವು ಕೂಡ ನಮ್ಮ ರಾಷ್ಟ್ರೀಯ ರಾಜಕೀಯ ಕರ್ತವ್ಯಗಳೆ. ಅದಕ್ಕೆ ನಾವು ಮಹತ್ವ ಕೊಡಬೇಕು. ಆದರೆ ಮಾರ್ಕ್ಸಿಸ್ಟ್-ಲೆನಿನಿಸ್ಟ್ ಪಕ್ಷವಾದ ಕಮ್ಯೂನಿಸ್ಟ್ ಪಾರ್ಟಿಯು ಗಮನಿಸತಕ್ಕ ಬೇರೆ ಕೆಲವು ವಿಷಯಗಳೂ ಇವೆ.

ನಾವು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಭಾಗವಾಗಿದ್ದೇವೆ. ಶಾಂತಿ, ಪ್ರಜಾಪ್ರಭುತ್ವ ಹಾಗು ಸಮಾಜವಾದದ ಸಲುವಾಗಿ ಜನಕೋಟಿಯ ಹೋರಾಟದ ನೇತೃತ್ವ ವಹಿಸುತ್ತಿರುವ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಅಂತರರಾಷ್ಟ್ರೀಯ ಸಹೋದರತೆಗೆ ಸೇರಿದವರು ನಾವು. ಈ ಭಾವನೆಯು ಇತ್ತೀಚೆಗೆ ನಮ್ಮ ಕೆಲವರಲ್ಲಿ ಸ್ವಲ್ಪ ಮಾಸಿ ಹೋಗಿದೆ. ಅಂತರರಾಷ್ಟ್ರೀಯ ಘಟನೆಗಳ ಬಗ್ಗೆ ಆಸಕ್ತಿ ಕಡಿಮೆಯಾಗಿರುವುದು, ಸರ್ವಪ್ರಧಾನವಾದ ಶಾಂತಿ ಸಮರದಲ್ಲಿ ಆಸಕ್ತಿ ಕಡಿಮೆಯಾಗಿರುವುದು, ಕಂಡು ಬರುತ್ತಿದೆ.

ಸಿರಿಯಾಕ್ಕೆ ಅಪಾಯ ಬಂದಾಗ, ಇಂಡೋನೇಶಿಯದ ದೇಶಪ್ರೇಮಿಗಳು ಪಶ್ಚಿಮ ಇರಿಯನ್ ವಿಮೋಚನೆಗೆ ಹೋರಾಡಿದಾಗ, ಚಾರಿತ್ರಿಕ ಕೈರೋ ಸಮ್ಮೇಳನ ನಡೆದಾಗ, ನಮ್ಮ ಪಾರ್ಟಿಯ ಕೆಲವೇ ಘಟಕಗಳು ಚಳುವಳಿ ನಡೆಸಿದ್ದೆಂದು ನಾವು ಒಪ್ಪಬೇಕಾಗಿದೆ. ಹೈಡೋಜನ್ ಹಾಗು ಆಟಂಬಾಂಬುಗಳ ಪರೀಕ್ಷಾ ಪ್ರಯೋಗವನ್ನು ತಡೆ ಹಿಡಿಯಬೇಕು ಎಂಬ ಕೇಳಿಕೆಯನ್ನು ಕುರಿತು ನಾವು ನಡೆಸಿರುವ ಚಳುವಳಿ ಬಹಳ ಕಡಿಮೆಯಾಗಿದೆ.

ಇದು ಗಂಭೀರವಾದ ಸ್ಥಿತಿ. ಈ ನ್ಯೂನತೆ ತೊಲಗಬೇಕು. ಮೋಸ್ಕೋದಲ್ಲಿ ಸಮಾವೇಶಗೊಂಡಿದ್ದ 64 ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಅಂಗೀಕರಿಸಿರುವ ಘೋಷಣೆಯನ್ನು ನಮ್ಮ ಜನತೆಯಲ್ಲಿ ಪ್ರಚಾರ ಮಾಡಬೇಕು. ಅದರ ಬಗ್ಗೆ ವಿಶಾಲವಾದ ಸಾಮುದಾಯಿಕ ಚಳುವಳಿ ನಡೆಸಬೇಕು. ಇದು ಬರೇ ಆಸೆಯಾಗಿ ಉಳಿಯತಕ್ಕದ್ದಲ್ಲ; ಕಾರ್ಯಕ್ಕೆ ಬರತಕ್ಕದು. ಅಂತರರಾಷ್ಟ್ರೀಯತೆಯ ಎಲ್ಲ ಅಂಶಗಳಿಗೂ ನಾವು ಮಹತ್ವ ಕೊಡಬೇಕು.

ಇದಕ್ಕೆಲ್ಲ ಪ್ರತಿಗಾಮಿಗಳ ಮತ್ತು ಸ್ಥಾಪಿತ ಹಕ್ಕುದಾರ ವರ್ಗಗಳ ವಿರೋಧವಾಗಿ ಹೋರಾಡಬೇಕು; ಸರಕಾರದ ಧೋರಣೆಗಳ ಜನವಿರೋಧಿ ಅಂಶಗಳನ್ನು ಪ್ರತಿಭಟಿಸಬೇಕು.

ಈ ಎಲ್ಲ ವಿಚಾರಗಳಲ್ಲೂ ಪಾರ್ಟಿಯ ನಿಲುವೆಯನ್ನು ಘೋಷಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಇನ್ನಷ್ಟು ಸ್ಪಷ್ಟೀಕರಿಸಬೇಕಾಗಿದೆ. ಅಲ್ಲದೆ, ಇಂದಿನ ಪರಿಸ್ಥಿತಿಯ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು, ಅದನ್ನು ಇದಿರಿಸಲು ರಾಷ್ಟ್ರೀಯ ರಾಜಕೀಯ ಚಳುವಳಿಯನ್ನು ಯೋಜನೆ ಮಾಡಬೇಕು. ಚುನಾವಣೆಗಳ ಕಾಲದಲ್ಲಿ ಜನತೆ ನಮಗೆ ಕೊಟ್ಟಿರುವ ಬೆಂಬಲ, ಈಗಲೂ ಜನತೆ ನಮ್ಮ ಘೋಷಣೆಗಳಿಗೆ ಕೊಡುತ್ತಿರುವ ಆದರ ಮುಂತಾದವುಗಳನ್ನು ನೋಡಿದರೆ ನಮ್ಮ ಧೋರಣೆಯ ಆಧಾರದಲ್ಲಿ ರಾಷ್ಟ್ರವ್ಯಾಪಕವಾದ ಚಳುವಳಿಯನ್ನು ನಡೆಸಲು ಪರಿಸ್ಥಿತಿ ಅನುಕೂಲವಾಗಿದೆ ಎಂದು ಸ್ಪಷ್ಟವಾಗುತ್ತದೆ. ರಾಷ್ಟ್ರವಿರೋಧಿ ಶಕ್ತಿಗಳ ತಂತ್ರಗಳನ್ನು ಸೋಲಿಸಲು ಸಾಧ್ಯವಿದೆ; ಪ್ರತಿಗಾಮಿಗಳನ್ನು ಸಮಜಾಯಿಸುವ ಸರಕಾರದ ಕ್ರಮಗಳನ್ನು ಸೋಲಿಸಲು ಸಾಧ್ಯವಿದೆ.

ಇಂಥ ರಾಷ್ಟ್ರವ್ಯಾಪಕವಾದ ಚಳುವಳಿಗಳನ್ನು ನಡೆಸದೆ, ನಮ್ಮ ಘೋಷಣೆಗೆಗೆ ಜನತೆಯ ಬೆಂಬಲ ಗಳಿಸದೆ, ನಮ್ಮ ಪಾರ್ಟಿಯನ್ನು ಸಾಮುದಾಯಿಕ ಪಕ್ಷವಾಗಿ ಬೆಳೆಸಲು ಸಾಧ್ಯವಿಲ್ಲ; ಇಂದಿನ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗಿ ಪ್ರವೇಶಿಸಿ ಅಗತ್ಯ ಬದಲಾವಣೆಗಳನ್ನು ಉಂಟುಮಾಡಲು ಸಾಧ್ಯವಿಲ್ಲ.

ಸಾಮುದಾಯಿಕ ಸಂಘಟನೆಗಳು

ಸಾಮುದಾಯಿಕ ಪಕ್ಷವನ್ನು ಕಟ್ಟುವುದಕ್ಕೆ ಸಂಬಂಧಿಸಿ ಪಾರ್ಟಿ ಸಂಘಟನೆಯ ಅನೇಕ ಸಮಸ್ಯೆಗಳನ್ನು ನಾವು ವಿಚಾರ ಮಾಡಬೇಕಾಗಿದೆ. ನಮ್ಮ ಚಟುವಟಿಕೆಯ ರೀತಿ, ಪಾರ್ಟಿ ಶಿಕ್ಷಣ, ಸಾಹಿತ್ಯ ಮಾರಾಟ, ನಿಧಿ ಸಂಗ್ರಹ ಇತ್ಯಾದಿ ವಿಷಯಗಳನ್ನೆಲ್ಲ ನಾವು ಆಲೋಚಿಸಬೇಕಾಗಿದೆ. ಅದನ್ನೆಲ್ಲ ಈ ಲೇಖನದಲ್ಲಿ ವಿವರಿಸುವುದಿಲ್ಲ. ಪ್ರಜಾಪ್ರಭುತ್ವ ಚಳುವಳಿಗೆ ನಿರ್ಣಾಯಕವಾದ ಪ್ರಾಮುಖ್ಯತೆಯಿರುವ ಸಾಮುದಾಯಿಕ ಸಂಘಟನೆಗಳು—ಮುಖ್ಯವಾಗಿ ಕಾರ್ಮಿಕರ ಮತ್ತು ರೈತರ ಸಂಘಟನೆಗಳ—ವಿಚಾರವನ್ನು ಮಾತ್ರ ಇಲ್ಲಿ ಹೇಳಲೇಬೇಕು. ಮಿಲಿಯಾಂತರ ಜನರನ್ನು ಒಳಗೊಂಡ ಸಾಮುದಾಯಿಕ ಸಂಘಟನೆಗಳು ಇಲ್ಲದೆ ಸಾಮುದಾಯಿಕ ಪಾರ್ಟಿ ಇರಲು ಸಾಧ್ಯವಿಲ್ಲ. ಪಾರ್ಟಿಗೆ ಜನತೆಯೊಡನೆ ಇರುವ ಸಂಬಂಧಗಳನ್ನು ಬಲಪಡಿಸುವುದಕ್ಕೆ ಸಾಮುದಾಯಿಕ ಸಂಘಟನೆಗಳು ಬೇಕೇ ಬೇಕು. ಸಾಮುದಾಯಿಕ ಸಂಘಟನೆಗಳು ಇಲ್ಲದಿದ್ದರೆ ಪಾರ್ಟಿಯು ವರ್ಚಸ್ಸು ರೂಪವಿಲ್ಲದೆ, ಪರಿಣಾಮಕಾರಿಯಲ್ಲದೆ, ಉಳಿಯುವುದು. ಅಲ್ಲದೆ ಪಾರ್ಟಿ ಸದಸ್ಯರು ಚುನಾವಣೆಗಳ ಮತ್ತಿತರ ಕೆಲವು ಚಳುವಳಿಗಳ ಸಂದರ್ಭಗಳ ಹೊರತು ಇತರ ಕಾಲಗಳಲ್ಲಿ ನಿಷ್ಕ್ರಿಯರಾಗಿ ಉಳಿಯುವರು. ಪಾರ್ಟಿಯ ಕಾರ್ಯಕರ್ತರು ಬರೇ ಪ್ರಚಾರಕರಾಗಿಯೂ ಪ್ರಕ್ಷೋಭಕಾರಿಗಳಾಗಿಯೂ ಉಳಿಯುವರು. ಸಾಮುದಾಯಿಕ ಸಂಘಟನೆಗಳು ಬೆಳವಣಿಗೆ ಅನಿವಾರ್ಯವಾಗಿದೆ.

ರೈತರ ಕಡೆಗೆ ಸಾಗಿರಿ

ಈ ಕ್ಷೇತ್ರದಲ್ಲಿ ನಾವು ಬಲಹೀನವಾಗಿದ್ದೇವೆ. ಮುಖ್ಯವಾಗಿ ರೈತರ ಮತ್ತು ಕೃಷಿ ಕೂಲಿಗಾರರ ಸಂಘಟನೆಗಳ ಮಟ್ಟಿಗೆ ನಾವು ಇನ್ನೂ ಹಿಂದುಳಿದಿದ್ದೇವೆ. ಹೆಚ್ಚು ಕಡಿಮೆ ಎಲ್ಲ ಪ್ರಾಂತಗಳಲ್ಲೂ ಕಿಸಾನ ಸಭೆಯು ನಿಷ್ಕ್ರಿಯವಾಗಿದೆ, ಪಕ್ಷವಾತ ಹಿಡಿದಂತಿದೆ. ಹಳ್ಳಿಗಳಲ್ಲಿ ನಮಗೆ ಓಟು ಕೊಟ್ಟಿರುವ ಲಕ್ಷಾಂತರ ರೈತರು, ಕೃಷಿ ಕೂಲಿಗಾರರು ಮತ್ತಿತರ ಬಡಜನರ ಪೈಕಿ ಒಂದು ಸಣ್ಣ ಭಾಗ ಕೂಡ ಇನ್ನೂ ಸಂಘಟಿತವಾಗಿರುವುದಿಲ್ಲ. ಹಳ್ಳಿಗಳಲ್ಲಿ ನಮ್ಮ ಚಟುವಟಿಕೆಗಳು ಯಾವಾಗಲಾದರೊಮ್ಮೆ ಹಠಾತ್ತಾಗಿ ಹುಟ್ಟುವ ಹೋರಾಟಗಳಾಗಿ, ಪ್ರಾದೇಶಿಕ ಹಾಗು ತಕ್ಷಣದ ಕೇಳಿಕೆಗಳ ಚಳುವಳಿಗಳಾಗಿ, ನಡೆಯುತ್ತಿವೆ. ಪ್ರಾಂತವ್ಯಾಪಕವಾದ ಚಳುವಳಿಗಳು ಕೂಡ ನಡೆಯುವುದು ಕಡಿಮೆ. ಕಿಸಾನ ಸಭೆಯ ಚಳುವಳಿಯು ಸಾಮಾನ್ಯ ಪ್ರಚಾರವಾಗಿ ನಡೆಯುತ್ತದೆ. ಪ್ರಾಮುಖ್ಯವಾದ ಸಮಸ್ಯೆಗಳಲ್ಲೂ ಸ್ಪಷ್ಟತೆ ಹಾಗು ಒಮ್ಮತವಿಲ್ಲ. ಈ ನ್ಯೂನತೆಗಳನ್ನು ನಿವಾರಿಸಲು ಸಾಕಷ್ಟು ಗಮನ ಕೊಡುವುದಿಲ್ಲ.

ಈ ನ್ಯೂನತೆಗಳನ್ನು ಕೊನೆಗಾಣಿಸಬೇಕು. ನಮ್ಮ ಕ್ರಾಂತಿಯ ಅತ್ಯಂತ ನಿರ್ಣಾಯಕ ಶಕ್ತಿಯಾದ ರೈತರ ಕಡೆಗೆ ಪಾರ್ಟಿಯ ಗಮನ ತಿರುಗಬೇಕು. ರೈತರ ಸಂಘಟನೆಯನ್ನು ಮುಖ್ಯ ಕರ್ತವ್ಯವಾಗಿ ಕೈಗೊಳ್ಳಬೇಕು. ಅಲ್ಲದಿದ್ದರೆ ಕಾರ್ಮಿಕ ವರ್ಗದ ನೇತೃತ್ವ ಎಂಬ ಘೋಷಣೆಯು ಪ್ರಾಯೋಗಿಕವಾಗಲಾರದು; ಶಾಸನ ಸಭೆಗಳಲ್ಲಿ ಕೂಡ ನಮ್ಮ ಸ್ಥಾನ ಉತ್ತಮವಾಗಲಾರದು.

ಸಾಮುದಾಯಿಕ ಕಮ್ಯೂನಿಸ್ಟ್ ಪಾರ್ಟಿ ಎನ್ನುವ ಘೋಷಣೆಯನ್ನು ರಾಜಕೀಯ ಹಾಗು ಸಾಮುದಾಯಿಕ ಕರ್ತವ್ಯಗಳಿಂದ ಬೇರ್ಪಡಿಸಿ ನೋಡಬಾರದು. ಸಾಮುದಾಯಿಕ ಸಂಘಟನೆಗಳ ಮಹತ್ತಾದ ಪ್ರಾಮುಖ್ಯತೆಯನ್ನು ಮರೆಯಬಾರದು. ಅದೇ ಸಾಮುದಾಯಿಕ ಕಮ್ಯೂನಿಸ್ಟ್ ಪಾರ್ಟಿಯ ಭದ್ರವಾದ ಬುನಾದಿ.

ಇದನ್ನೆಲ್ಲ ನಾವು ಇಂದು ಒಂದು ಹೊಸ ದೃಷ್ಟಿಕೋನದಿಂದ ನೋಡಬೇಕು. ಪಾರ್ಟಿಗೆ ಇಂದು ದೇಶದಲ್ಲಿರುವ ಸ್ಥಾನ ಮತ್ತು ಉತ್ತಮ ಜೀವನದ ಸಲುವಾಗಿ ಜನತೆಯ ಹೋರಾಟದಲ್ಲಿ ಐಕ್ಯತೆಯನ್ನು ಬೆಳೆಸುವ ಮತ್ತು ನೇತೃತ್ವ ವಹಿಸುವ ಪಾತ್ರವನ್ನು ತಿಳಿದುಕೊಳ್ಳಬೇಕು. ತಾತ್ವಿಕ, ರಾಜಕೀಯ ಮತ್ತು ಸಂಘಟನಾತ್ಮಕ ಕರ್ತವ್ಯಗಳನ್ನು ನೆರವೇರಿಸಬೇಕು. ಈ ಘನವಾದ ಹೊಣೆಗಾರಿಕೆ ಇಂದು ನಮ್ಮ ಹೆಗಲ ಮೇಲಿದೆ.

—(ಮುಗಿಯಿತು)—

ಕೊಡಗು ಜಿಲ್ಲಾ ರೈತ ಸಂಘದ ಪ್ರಥಮ ಸಮ್ಮೇಳನ

ಕೊಡಗು ಜಿಲ್ಲಾ ರೈತ ಸಂಘವು 1952 ರಲ್ಲಿ ಸ್ಥಾಪನೆಯಾಗಿ ಕಳೆದ ಐದಾರು ವರುಷಗಳಿಂದ ಜಿಲ್ಲೆಯ ರೈತರ ಹಿತರಕ್ಷಣೆಗೆ ದುಡಿಯುತ್ತಲಿದೆ. ಅದರ ಪ್ರಥಮ ಸಮ್ಮೇಳನವು ಕುಶಾಲನಗರದಲ್ಲಿ ಮಾರ್ಚಿ ತಾ. 3 ಮತ್ತು 4ರಂದು ನಡೆಯಿತು.

ಮೊದಲನೆಯ ದಿನ ಮುಂಜಾನೆ 7 ಘಂಟೆಗೆ ಬೆಟ್ಟಗೇರಿಯಿಂದ ಧ್ವಜಸ್ತಂಭವನ್ನು ಎತ್ತಿಕೊಂಡು ರೈತರ ಮೆರವಣಿಗೆ ಹೊರಟಿತು. ಮೆರವಣಿಗೆಯು ಕುಶಾಲನಗರಕ್ಕೆ ತಲುಪಿದ ನಂತರ, ಸಿನೆಮಾ ಮಂದಿರದ ಆವರಣದಲ್ಲಿ ಧ್ವಜಸ್ತಂಭವನ್ನು ನೆಟ್ಟು, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ರೈತ ಬಾವುಟವನ್ನು ಅರಳಿಸಿದರು.

ಮಧ್ಯಾಹ್ನ 3 ಘಂಟೆಗೆ ಸಿನೆಮಾ ಮಂದಿರದಲ್ಲಿ ಪ್ರತಿನಿಧಿಗಳ ಸಭೆ ಆರಂಭವಾಯಿತು. ಸ್ವಾಗತ ಸಮಿತಿಯ ಕಾರ್ಯದರ್ಶಿ ಪೊನ್ನಪ್ಪನವರು ಪ್ರತಿನಿಧಿಗಳನ್ನೂ ಅಧ್ಯಕ್ಷರನ್ನೂ ಸ್ವಾಗತಿಸಿ, ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘದ ಅಧ್ಯಕ್ಷ ಶ್ರೀ ಎ. ಕೃಷ್ಣ ಶೆಟ್ಟರು ಅಧ್ಯಕ್ಷತೆ ವಹಿಸಬೇಕೆಂದು ಕೇಳಿಕೊಂಡರು.

ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ ರೈತರ ಮುಂದಿರುವ ಸಮಸ್ಯೆಗಳನ್ನು ವಿವರಿಸಿದರು. ಅನಂತರ ಶ್ರೀ ಬಿ. ವಿ. ಕಕ್ಕಿಲ್ಲಾಯರು ಪ್ರಾಂತ ರೈತ ಸಂಘದ ಸಂದೇಶವನ್ನು ಕೊಡುತ್ತ, ಭೂಸುಧಾರಣೆಯ ವಿರೋಧವಾಗಿ ಭೂಮಾಲಿಕರೂ ಅವರ ಬೆಂಬಲಿಗರಾದ ಶಾಸನ ಸಭಾ ಸದಸ್ಯರೂ ರಾಜಕೀಯ ಮುಂದಾಳುಗಳೂ ನಡೆಸುತ್ತಿರುವ ಚಳುವಳಿಯನ್ನು ಖಂಡಿಸಿದರು. ರೈತರು ಒಗ್ಗಟ್ಟಾಗಿ ಪ್ರಾಂತದ ಆದ್ಯಂತ ತಮ್ಮ ಹಕ್ಕುಗಳ ರಕ್ಷಣೆಗೂ ಭೂಸುಧಾರಣೆಗೂ ಹೋರಾಡಬೇಕೆಂದು ಕೇಳಿಕೊಂಡರು. ಶ್ರೀರಂಗಪಟ್ಟಣ ತಾಲೂಕು ರೈತ ಮುಖಂಡ ಶ್ರೀ ಬೋರೇಗೌಡರು ಮಾತನಾಡುತ್ತ, ಏನೇ ಬಂದರೂ ರೈತರು ಒಗ್ಗಟ್ಟಾಗಿ ಇರಬೇಕು, ಹೊಲ ಬಿಟ್ಟು ಕದಲಬಾರದು, ಶಾಂತಿ ಮತ್ತು ಶಿಸ್ತಿನಿಂದ ತಮ್ಮ ಹಕ್ಕುಗಳನ್ನು ಕಾಪಾಡಬೇಕು ಎಂದು ಹೇಳಿದರು.

ಕೊಡಗು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ವೈ. ಟಿ. ಅಯ್ಯಪ್ಪನವರು ವರದಿಯನ್ನು ಸಮ್ಮೇಳನದ ಮುಂದಿಟ್ಟರು. ಕೊಡಗಿನ ಅಧಿಕಾರಿಗಳೂ ಪೋಲೀಸು ಮುಖ್ಯಸ್ಥರೂ ಜಮೀನ್ದಾರರ ಅಕ್ರಮಗಳನ್ನು ಕಂಡೂ ತಡೆಯದಿರುತ್ತಾರೆ, ರೈತರ ಮತ್ತು ರೈತ ಸಂಘದ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆಸುತ್ತಾರೆ ಎಂದು ತಿಳಿಸಿದರು.

ಪ್ರತಿನಿಧಿಗಳಲ್ಲಿ ತಮ್ಮ ತಮ್ಮ ಪ್ರದೇಶಗಳ ಪರಿಸ್ಥಿತಿಯನ್ನು ವಿವರಿಸಿದರು; ರೈತ ಸಂಘದ ಚಟುವಟಿಕೆಯ ವರದಿಗಳನ್ನು ಒಪ್ಪಿಸಿದರು.

ಎರಡನೆಯ ದಿನ ಮುಂಜಾನೆ 9 ಘಂಟೆಗೆ ಪ್ರತಿನಿಧಿಗಳ ಸಭೆ ತಿರುಗಿ ಆರಂಭವಾಯಿತು. ಭೂಸುಧಾರಣೆಯ ಕಾನೂನನ್ನು ಈಗ ನಡೆಯುತ್ತಿರುವ ವಿಧಾನ ಸಭೆಯ ಅಧಿವೇಶನದಲ್ಲೇ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುವ ಠರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಒಕ್ಕಲುಗಳಿಂದ ಹೊಲ ತಪ್ಪಿಸುವುದನ್ನು ಸಂಪೂರ್ಣ ನಿಷೇಧಿಸಬೇಕು, 1957ರ ಆರ್ಡಿನೆನ್ಸಿನಿಂದೀಚೆಗೆ ಕೂಲಿ ಕರಾರು ಬರೆಸಿಕೊಂಡಿರುವುದನ್ನೂ ಪುನರ್‌ಪರಿಶೀಲನೆ ನಡೆಸಿ ಹೊಲ ಕಳೆದುಕೊಂಡಿರುವ ಒಕ್ಕಲುಗಳಿಗೆ ಹೊಲ ತಿರುಗಿ ಕೊಡಿಸಬೇಕು; ಸ್ವಂತ ಜಾಮೀನಿನಲ್ಲಿ ಬೇಸಾಯ ಮಾಡುತ್ತಿರುವ ಭೂಮಾಲಿಕರು ಹಾಗೆ ಬೇಸಾಯ ಮಾಡುತ್ತಿರುವ ಜಮೀನು ಅವರ ಹಿಡುವಳಿಯಲ್ಲಿ ಉಳಿಯಬೇಕಲ್ಲದೆ, ಬೇಸಾಯ ಮಾಡದಿರುವ ಭೂಮಾಲಿಕರು ಒಕ್ಕಲುಗಳಿಂದ ಜಮೀನನ್ನು ಸ್ವಂತ ಸಾಗುವಳಿಗೆಂದು ವಶಪಡಿಸಿಕೊಳ್ಳದಂತೆ ತಡೆಯುವ ಮತ್ತು ಹಿಡುವಳಿ ವಿಸ್ತೀರ್ಣಕ್ಕೆ ಪರಿಮಿತಿ ನಿರ್ಣಯಿಸಿ ಬೇಸಾಯಗಾರರಲ್ಲದ ಜಮೀನ್ದಾರರ ಜಮೀನಿನ ಬಹುಭಾಗವೂ ಪುನರ್‌ವಿತರಣೆ ಒದಗುವಂತೆ ಏರ್ಪಾಡಾಗಬೇಕು; 1952 ರಿಂದ 10 ಎಕ್ರೆಗಳಿಗಿಂತ ಹೆಚ್ಚು ಸರಕಾರಿ ಪೈಸಾರಿ ಜಮೀನನ್ನು ಯಾರ್ಯಾರಿಗೆ ಕೊಡಲಾಗಿದೆ ಎಂದು ಪುನರ್‌ಪರಿಶೀಲನೆ ನಡೆಸಬೇಕು, ಬೇರೆ ಜಮೀನಿಲ್ಲದವನಿಗೆ ಕೊಡಲಾಗಿರುವುದನ್ನು ಅಂಥವರ ಹೆಸರಲ್ಲಿ ಖಾಯಂ ಮಾಡಬೇಕು, ಬೇರೆ ಜಮೀನು ಇರುವವರಿಗೆ ಕೊಡಲಾಗಿರುವುದನ್ನು ರದ್ದು ಮಾಡಿ ಜಮೀನಿಲ್ಲದವರಿಗೆ ಹಂಚಬೇಕು. ಇತ್ಯಾದಿ ಕೇಳಿಕೆಗಳನ್ನು ಆ ನಿರ್ಣಯದಲ್ಲಿ ಸರಕಾರದ ಮುಂದಿಡಲಾಗಿದೆ.

ಹಿಂದುಸ್ತಾನ ವಿಮಾನ ಕಾರ್ಖಾನೆ ಕೆಲಸಗಾರರ ಮೇಲೆ ಗೋಳಿಬಾರು ನಡೆಸಿರುವುದನ್ನೂ 144ನೇ ಸೆಕ್ಷನ್ ಪ್ರಕಾರ ನಿರ್ಬಂಧಾಜ್ಞೆ ಹೊರಡಿಸಿರುವುದನ್ನೂ ಕಮ್ಯೂನಿಸ್ಟ್ ಪಾರ್ಟಿಯ ಮತ್ತು ಕಾರ್ಮಿಕ ಸಂಘಗಳ ನಾಯಕರನ್ನು ಬಂಧಿಸಿರುವುದನ್ನೂ ಖಂಡಿಸುವ, ಗೋಳಿಬಾರಿನ ಬಗ್ಗೆ ಬಹಿರಂಗ ವಿಚಾರಣೆ ಆಗಬೇಕೆಂದೂ ನಿರ್ಬಂಧಾಜ್ಞೆ ಮತ್ತು ಖಟ್ಲೆಗಳನ್ನು ಹಿಂತೆಗೆಯಬೇಕೆಂದೂ ಕೇಳುವ, ಹಿಂದುಸ್ತಾನ ವಿಮಾನ ಕಾರ್ಖಾನೆಯ ಲಾಕ್ ಔಟ್ ಹಿಂಗೆದು ಯಾವ ಶಿಕ್ಷಾ ಕ್ರಮವನ್ನೂ ತೆಗೆಯದೆ ಎಲ್ಲ ಕೆಲಸಗಾರರಿಗೂ ತಿರುಗಿ ಕೆಲಸ ಕೊಡಬೇಕೆಂದು ಒತ್ತಾಯಿಸುವ ನಿರ್ಣಯ ಅಂಗೀಕರಿಸಲ್ಪಟ್ಟಿತು.

ಕೊಡಗು ಜಿಲ್ಲಾ ರೈತ ಸಂಘಕ್ಕೆ ಶ್ರೀ ಸಿ. ಬಿ. ಪೊಣ್ಣಯ್ಯ ಅಧ್ಯಕ್ಷ, ಡಾ| ಬಿ. ಕೆ. ನಂಜುಂಡೇಶ್ವರ ಉಪಾಧ್ಯಕ್ಷ, ಶ್ರೀ ವೈ. ಟಿ. ಅಯ್ಯಪ್ಪ ಪ್ರಧಾನ ಕಾರ್ಯದರ್ಶಿ, ಶ್ರೀ ಎಂ. ಇಸ್ಮಾಯಿಲ್ ಕೋಶಾಧಿಕಾರಿ, ಮೂವರು ಉಪಕಾರ್ಯದರ್ಶಿಗಳು ಮತ್ತು ಹತ್ತು ಮಂದಿ ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಸೋಮವಾರಪೇಟೆ, ವಿರಾಜಪೇಟೆ ಮತ್ತು ಮಡಿಕೇರಿನಾಡು ತಾಲೂಕು ರೈತ ಸಂಘಗಳನ್ನು ರಚಿಸಲು ನಿರ್ಣಯವಾಯಿತು.

ಸಂಜೆ 4 ಘಂಟೆಗೆ ರೈತ ಸಂಘದ ಕಛೇರಿಯ ಮುಂದುಗಡೆಯಿಂದ ಕಾರ್ಮಿಕರ ಮತ್ತು ರೈತರ ಮೆರವಣಿಗೆ ಹೊರಟು ಕುಶಾಲನಗರದಲ್ಲೂ ಹತ್ತಿರದ ಹಳ್ಳಿಗಳಲ್ಲೂ ಸುತ್ತಾಡಿತು. ಅನಂತರ ಜರಗಿದ ಬಹಿರಂಗ ಸಭೆಯಲ್ಲಿ ಡಾ| ಬಿ. ಕೆ. ನಂಜುಂಡೇಶ್ವರರವರು ಅಧ್ಯಕ್ಷತೆ ವಹಿಸಿದರು. ಶ್ರೀ ಎ. ಕೃಷ್ಣ ಶೆಟ್ಟರು ಉದ್ಘಾಟನಾ ಭಾಷಣ ಮಾಡಿದರು. ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಸಿ. ಬಿ. ಪೊಣ್ಣಯ್ಯ, ವೈ. ಟಿ. ಅಯ್ಯಪ್ಪ, ಸಿ. ಎಂ. ಪೂನ್ನಪ್ಪ ಮತ್ತು ಎಂ. ಇಸ್ಮಾಯಿಲ್ ಭಾಷಣ ಮಾಡಿದರು.

ವಂದನಾರ್ಪಣೆ ಮತ್ತು ಜಯಕಾರಗಳೊಡನೆ ಸಭೆ ಮುಕ್ತಾಯವಾಯಿತು.

ಅನಂತರ ಯಕ್ಷಗಾನ ಬಯಲು ನಾಟಕದಿಂದ ಮನೋರಂಜನೆಯ ಕಾರ್ಯಕ್ರಮ ನೆರವೇರಿತು.

ಅಂಧ್ರ ಕಮ್ಯೂನಿಸ್ಟ್ ವಿಜಯ !

ಕಮ್ಯೂನಿಸ್ಟ್ ಪಕ್ಷದ ಉಮೇದುವಾರರಾದ ಶ್ರೀ ಬದ್ದಾಮ್ ಯೆಲ್ಲಾ ರೆಡ್ಡಿಯವರು ಬುಗ್ಗಾರಂ ಕ್ಷೇತ್ರದಿಂದ ಕಾಂಗ್ರೆಸ್ ಪ್ರತಿಸ್ಪರ್ಧಿ ಶ್ರೀ ಲಕ್ಷ್ಮೀನರಸಿಂಹ ರಾವ್ ರವರನ್ನು ಸೋಲಿಸಿ ಆಂಧ್ರ ಅಸೆಂಬ್ಲಿಗೆ ಚುನಾಯಿತರಾಗಿದ್ದಾರೆ. ಎಲ್ಲಾ ರೆಡ್ಡಿಯವರು 17,130 ಮತಗಳನ್ನೂ ಶ್ರೀ ರಾವ್‌ರವರು 14,-895 ಮತಗಳನ್ನೂ ಗಳಿಸಿರುತ್ತಾರೆ. 2 235 ಹೆಚ್ಚು ಮತಗಳನ್ನು ಗಳಿಸಿ ಕಮ್ಯೂನಿಸ್ಟ್ ಉಮೇದುವಾರರು ವಿಜೇತರಾಗಿದ್ದಾರೆ.

ಇದು ಕೂಡಿ, ಆಂಧ್ರದಲ್ಲಿ ಇಸ್ವರ ವರೆಗೆ 4 ಉಪ ಚುನಾವಣೆಗಳು ನಡೆದಿವೆ ನಾಲ್ಕರಲ್ಲೂ ಕಮ್ಯೂನಿಸ್ಟ್ ಬೆಂಬಲ ಪಡೆದ ಸ್ಪರ್ಧಿಗಳೇ ಗೆದ್ದಿರುತ್ತಾರೆಂಬುದು ಗಮನಾರ್ಹ ವಿಷಯ. ಆಂಧ್ರದ ಜನತೆ, ಇಂದು ಯಾವ ಪಕ್ಷದಲ್ಲಿ ತಮ್ಮ ಭವಿತವ್ಯದ ಭರವಸೆಯನ್ನು ಇಟ್ಟಿರುತ್ತಾರೆಂಬುದಕ್ಕೆ ಇದು ಸಂಕೇತವಾಗಿದೆ.

(೨ನೇ ಪುಟದಿಂದ)

ಶಿವಮೊಗ್ಗ ಕಮ್ಯೂನಿಸ್ಟ್ ಕಾರ್ಯಕರ್ತರ ಸಭೆ

ತಾಲ್ಲೂಕು ಸಮಿತಿ ಕಾರ್ಯದರ್ಶಿ ಶ್ರೀ ಎಂ. ಸಿ. ಸದಾಶಿವಪ್ಪನವರು ಪಾರ್ಟಿಯನ್ನು ಜಿಲ್ಲಾದ್ಯಂತ ಸಂಘಟಿಸುವ ವಿಷಯ ಮತ್ತು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಯಾಲಯ ಪ್ರಾರಂಭಿಸಬೇಕೆಂಬ ಮಹೋದ್ದೇಶವನ್ನು ತಿಳಿಸಿ, ಸರ್ವರೂ ಇನ್ನೂ ಹೆಚ್ಚು ಕರ್ತವ್ಯಪರರಾಗಬೇಕೆಂದು ಮನವಿ ಮಾಡಿ, ಈ ವರೆಗೆ ಪಾರ್ಟಿ ಸಂಘಟನೆ ಬಗ್ಗೆ ಕೆಲಸ ಮಾಡಿದ ಸರ್ವರನ್ನೂ ವಂದಿಸಿದರು.

ಓದುಗರ ಓಲೆ

'ತೋಟಕ್ಕೆ ಹೋಗಿ ಚಕ್ಕಂದ ಮನೆಗೆ ಬಂದು ಇಕ್ಕಂದ'

ಗೌರೀಬಿದನೂರಿನ ಮುಳಿಕಿಬಿದ್ದಿರುವ ಗೃಹ ನಿರ್ಮಾಣ ಸಹಕಾರ ಸಂಘದ ಕೆಲಸ ನಡೆಸಲು ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟಂಟ್ ರಿಜಿಸ್ಟ್ರಾರ್‌ರವರನ್ನು ಗೌರೀಬಿದನೂರು ಕ್ಯಾಂಪ್‌ನಲ್ಲಿ ಸಂಘದ ಸದಸ್ಯರು ಮತ್ತು ಕಮಿಟಿ ಡೈರೆಕ್ಟರ್‌ಗಳೆಲ್ಲ ಪದೇ ಪದೇ ಅವರನ್ನು ಕೇಳಿದಾಗ್ಗೆ ಆರ್ಡರು ಕಳುಹಿಸುವುದಾಗಿ ಹೇಳಿ ಅತ್ತ ಹೋಗಿದ್ದಾರೆ. ಇತ್ತ ಸಂಘದ ಕೆಲಸವು ನಡೆಸಲಿಕ್ಕೆ ಒಂದು ಕಮಿಟಿ ಸಹ ಇಲ್ಲದೆ ತಾಯಿ ತಂದೆಗಳಿಲ್ಲದ ಕೂಸಾಗಿರುವುದು, ಸದಸ್ಯರೆಲ್ಲ ಕೇಳಿ ಗುಜುಗುಂಪುಲು ಬಿದ್ದು, ಸೇರು ಧನಕ್ಕೆ ಮೋಸವೆಂಬ ಪ್ರಸಂಗ ಊರಲ್ಲೆಲ್ಲಾ ಹರಡಿರುವುದು ತುಂಬಾ ಶೋಚನೀಯವಾದ ಸಂಗತಿಯಾಗಿದೆ. ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ಇತ್ತ ಕಡೆ ಗಮನ ಕೊಟ್ಟು, ಕೆಲಸ ನಡೆಸಲು ಅನುಕೂಲ ಮಾಡಿಕೊಡುವರೆ ?

ಬೆಂಗಳೂರಲ್ಲಿ ದಾತಾರರಿಗೆ ಪೂಜೆ !

ಕೇಂದ್ರದ ಉಪಗೃಹ ಮಂತ್ರಿ ಶ್ರೀಮಾನ್ ದಾತಾರರು ಬೆಂಗಳೂರಿಗೆ ಬಂದಿದ್ದು ಮಲ್ಲೇಶ್ವರದಲ್ಲಿ ಸ್ವಾಮಿಗಳ ಸಮಾಜದ ಸಭೆಯೊಂದರ ಅಧ್ಯಕ್ಷತೆ ವಹಿಸಿದ್ದರು.

ಸ್ವಾಮಿ ಚಿನ್ಮಯಾನಂದರು ಭಾರತ ಸರ್ಕಾರವನ್ನು ಟೀಕಿಸಿದ್ದನ್ನು ಸಹಿಸದೆ ದಾತಾರರು ಅವರಿಗೆ ಎಚ್ಚರಿಕೆ ಇತ್ತರು. ಕೂಡಲೇ ನೆರೆದ ಸಭಿಕರು ದಾತಾರರ ಮೇಲೆ ಕ್ರೋಧಗೊಂಡು ಅವರು ಮಾತಾಡದ ಹಾಗೆ ಬೊಬ್ಬಿಟ್ಟರೆಂದೂ ಸಭೆಯು ಕೊನೆಗೆ ಗಲಭೆಯಲ್ಲಿ ಕೊನೆಗೊಂಡಿತೆಂದೂ ವರದಿಯಾಗಿದೆ.

ಇದೇನು ಅಷ್ಟು ದೊಡ್ಡ ವಿಷಯವಲ್ಲ. ಆದರೆ ನಮ್ಮ ಮಂತ್ರಿಗಳ ಸ್ವೇಚ್ಛಾಧಿಕಾರ ಹಾಗೂ ಒರಟುತನ ಎಷ್ಟಿದೆ ಎಂಬುದಕ್ಕೆ ಇದು ಸಾಕ್ಷಿ. ಜನರು ಇದಕ್ಕೆ ಯಾವ ರೀತಿಯ ಪೂಜೆ ಸಲ್ಲಿಸುತ್ತಾರೆಂಬುದಕ್ಕೆ ಇದು ಒಂದು ನಿದರ್ಶನ. ದಾತಾರರಿಗೆ ಹೂವಿನ ಪೂಜೆಯ ಬದಲು ಕಲ್ಲಿನ ಪೂಜೆ ಮಾಡಿದ್ದಾರೆ ಅಷ್ಟೆ.

ಧಾರವಾಡದ ಸರ್ಕಾರಿ ಕಾಲೇಜಿಗೆ ಆಜಾದರ ಸ್ಮರಣೆ ಬೇಡವೇ?

ಧಾರವಾಡದ ಎಗ್ರಿಕಲ್ಚರಲ್ ಕಾಲೇಜು ಆಜಾದರ ಮರಣ ದಿನದ ಸ್ಮರಣೆಗಾಗಿ ಮುಚ್ಚಿಲ್ಲವೆಂದು ವರದಿಯಾಗಿದೆ. ಈ ಕಾಲೇಜು ಸರ್ಕಾರಿ ಕಾಲೇಜಾಗಿದ್ದು, ಮೌಲಾನ ಆಜಾದರು ರಾಷ್ಟ್ರದ ನಾಯಕರೆಂದಲ್ಲವಾದರೂ ಕೇಂದ್ರದ ವಿದ್ಯಾಮಂತ್ರಿಗಳೆಂದಾದರೂ ಮುಚ್ಚಬೇಕಾಗಿದ್ದುದು ನ್ಯಾಯತಾನೆ !

ಪ್ರತಿಭಟನಾ ದಿನಾಚರಣೆ

ಮಂಗಳೂರು

ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್‌ನ ಉತ್ಸಾಹೀ ಕಾರ್ಯಕರ್ತರ ಸಭೆಯು ತಾ. 26—2—58ನೇ ಬುಧವಾರ ಸಂಜೆ ಘಂಟೆ 8ಕ್ಕೆ ತೊಕ್ಕೊಟ್ಟು ಯೂನಿಯನಿನ ಆಫೀಸಿನಲ್ಲಿ ಸಂಘದ ಅಧ್ಯಕ್ಷ ಯು. ಎ. ಚೆಯ್ಯಬ್ಬನವರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಂಗಳೂರು ವಿಮಾನ ಕಾರ್ಖಾನೆಯ ಮಜೂರರ ಶಾಂತರೀತಿಯ ಮೆರವಣಿಗೆಯ ಮೇಲೆ ಪೋಲೀಸ್ ಅಧಿಕಾರಿಗಳು ಗೋಳೀಬಾರ್ ನಡೆಸಿದ ಪರಿಣಾಮವಾಗಿ ಓರ್ವ ಮಜೂರನು ಮೃತಪಟ್ಟದ್ದಲ್ಲದೆ, ಅನೇಕ ಜನರು ಗಾಯಗೊಂಡದ್ದಕ್ಕಾಗಿ ಈ ಸಭೆಯು ಸಂತಾಪ ವ್ಯಕ್ತಪಡಿಸಿರುತ್ತದೆ. ಅಲ್ಲದೆ ಮಜೂರರ ಮೇಲೆ ಗೋಳಿಬಾರ್ ನಡೆಸಿದ ಮೈಸೂರು ಸರಕಾರದ ವರ್ತನೆಯನ್ನು ಈ ಸಭೆಯು ತೀವ್ರವಾಗಿ ಖಂಡಿಸುವ ಠರಾವನ್ನು ಮಂಜೂರು ಮಾಡಿತು.

ಕಾರ್ಯದರ್ಶಿ, ಯು. ಜನಾರ್ಧನ್ ನಾಯಕ್‌ರವರು ಸಭೆ ಕರೆದ ಉದ್ದೇಶವನ್ನು ವಿವರಿಸಿ, ಮಾರ್ಚಿ ತಿಂಗಳಲ್ಲಿ ಜರಗಲಿರುವ, ಜಿಲ್ಲಾ ಮಜೂರರ 6ನೇ ಸಮ್ಮೇಳನದ ಅಂಗವಾಗಿ ಅಲ್ಲಲ್ಲಿ ಏರಿಯ ಮೀಟಿಂಗ್ ನಡೆಸುವ ಮತ್ತು ತಾರೀಕು 11—3—58ನೇ ಮಂಗಳವಾರ ತೊಕ್ಕೊಟ್ಟಿನಲ್ಲಿ ಬಹಿರಂಗ ಸಭೆ ನಡೆಸಬೇಕೆಂದು ತೀರ್ಮಾನಿಸಲಾಯಿತು. ಸಮ್ಮೇಳನದ ಸ್ವಾಗತ ಸಮಿತಿಗೆ ಸದಸ್ಯರನ್ನು ಸೇರಿಸುವ ಬಗ್ಗೆ ಯೂನಿಯನಿನ ಎಲ್ಲಾ ಕಾರ್ಯಕರ್ತರೂ ಭಾಗವಹಿಸಬೇಕೆಂದು ನಿರ್ಣಯ ಮಾಡಲಾಯಿತು.

ಬಳಿಕ ಅಧ್ಯಕ್ಷರ ಭಾಷಣದೊಂದಿಗೆ ಸಭೆಯು ಕೊನೆಗೊಂಡಿತು.

ಸೋಮವಾರಪೇಟೆ

ತಾ. 22ರಲ್ಲಿ ಸೋಮವಾರಪೇಟೆ ರೈತ ಸಂಘದ ಅಧ್ಯಕ್ಷರಾದ ಕಾ॥ ಜಿ. ಟಿ. ತಮ್ಮಯ್ಯನವರು ಅಬೂರುಕಟ್ಟೆ ಯಲಕನೂರು ಹೊಸಳ್ಳಿ ಈ ಕಡೆಗಳಲ್ಲಿ ರೈತ ಸಂಘದ ಬಹಿರಂಗ ಸಭೆ ಕರೆದಿದ್ದರು. ಈ ಸಭೆಗೆ ನೂರಾರು ಜನರು ಆಗಮಿಸಿದ್ದರು. ಕರ್ನಾಟಕದ ರೈತ ಸಂಘದ ಕಮಿಟಿ ಮೆಂಬರರಾದ ಕಾ॥ ವೈ. ಟಿ. ಅಯ್ಯಪ್ಪನವರು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ಮೈಸೂರು ಸರಕಾರದ ರೈತ ವಿರೋಧಿ ನೀತಿಯನ್ನು ವಿವರಿಸಿದ ನಂತರ ನೆರೆದಿದ್ದವರೆಲ್ಲಾ ಪ್ರತಿಭಟಿಸಿ ತಮ್ಮ ಬೆಂಬಲವನ್ನು ನೀಡಿದರು. ಮಾರ್ಚಿ ತಾ. 2, 3, 4ರಲ್ಲು ಕೊಡಗು ಜಿಲ್ಲೆಯ ರೈತ ಸಂಘದ ಪ್ರಥಮ ಸಮ್ಮೇಳನವು ಕುಶಾಲನಗರದಲ್ಲಿ ನಡೆಯುವುದರಿಂದ, ಸರ್ವರೂ ಭಾಗಿಗಳಾಗಬೇಕೆಂದೂ, ಶಕ್ತ್ಯಾನುಸಾರ ಈ ಸಮ್ಮೇಳನಕ್ಕೆ ಧನಸಹಾಯವನ್ನೂ ಮಾಡಬೇಕೆಂದು ಅಧ್ಯಕ್ಷರಾದ ಬಿ. ಸಿ. ಮಲ್ಲಪ್ಪನವರು ಕೇಳಿಕೊಂಡರು. ಕಾ॥ ಎನ್. ಎಂ. ಮುತ್ತಣ್ಣನವರು "ಜನಶಕ್ತಿ" ಪತ್ರಿಕೆಯ ಅವಶ್ಯಕತೆಯನ್ನು ಒತ್ತಿಹೇಳಿ, ಎಲ್ಲರೂ ಈ ಪತ್ರಿಕೆಯನ್ನು ತರಿಸಿಕೊಂಡು ಓದಬೇಕೆಂದು ಕೇಳಿಕೊಂಡರು. ಕಾ॥ ಜಿ. ಟಿ. ತಮ್ಮಯ್ಯನವರನ್ನು ಕಾರ್ಯದರ್ಶಿಯನ್ನಾಗಿ 9 ಜನರ ಒಂದು ಗ್ರಾಮ ಸಮಿತಿಯನ್ನು ರಚಿಸಿದ ನಂತರ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.

ಉಡುಪಿ

ಮೈಸೂರು ಸರಕಾರದ ಮಜೂರ-ರೈತ—ಜನ ವಿರೋಧಿ ಪ್ರತಿಗಾಮಿ ನೀತಿ ವಿರುದ್ಧವಾಗಿ, ಉಡುಪಿಯ ಎಲ್ಲಾ ಟ್ರೇಡ್ ಯೂನಿಯನ್‌ಗಳ, ರೈತ ಸಂಘ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಸಂಯುಕ್ತ ಆಶ್ರಯದಲ್ಲಿ ಪ್ರತಿಭಟನಾ ಸಭೆಯೊಂದು ತಾ. 23—2—1958ರಂದು ರಥಬೀದಿಯಲ್ಲಿ ಶ್ರೀ ಟಿ. ರಾಮಮೋಹನ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಮಜೂರರ ಅನೇಕ ವಿವಾದಗಳನ್ನು ಇನ್ನೂ ತೀರ್ಮಾನ ಮಾಡದೆ ಕಾಲ ವಿಳಂಬ ಮಾಡುವ ಮತ್ತು ಕೈಗಾರಿಕಾ ಮಜೂರರಿಗೆ ಕನಿಷ್ಟ ಮಜೂರಿ ನಿರ್ಣಯಿಸಲು ನಿರಾಕರಿಸುವ, ದ. ಕ. ಜಿಲ್ಲೆ ಮತ್ತು ಕೊಡಗಿಗೆ ಪ್ರತ್ಯೇಕ ಕೈಗಾರಿಕಾ ಕೋರ್ಟನ್ನು ನೇಮಿಸಲು ಅಸಮ್ಮತಿಸುವ ಮತ್ತು ರೈತರನ್ನು ಒಕ್ಕಲೆಬ್ಬಿಸುವುದನ್ನು ತಡೆದು, ರೈತರಿಗೆ ಭೂಮಿಯಲ್ಲಿ ಶಾಶ್ವತ ಹಕ್ಕು ಕೊಡುವಂಥ ಪ್ರಗತಿಶೀಲ ಭೂಸುಧಾರಣೆಯನ್ನು ತರಲು ಕಾಲವಿಳಂಬ ಮಾಡಿ, ಹಿಂಜರಿಯುತ್ತಿರುವ ಮೈಸೂರು ಸರಕಾರದ ಅಸಮರ್ಥ ಮತ್ತು ಪ್ರತಿಗಾಮಿ ಧೋರಣೆಯನ್ನು ಬಯಲಿಗೆಳೆದು ಶ್ರೀಗಳಾದ ದಾಸ ಸೇರಿಗಾರ್, ಸಿಂಪ್ಸನ್ ಸೋನ್ಸ್, ಡೇವಿಡ್ ಕರ್ಕಡ ಮತ್ತು ಪಿ. ಸೀನ ನಾಯ್ಕರು ಸಭೆಯಲ್ಲಿ ಭಾಷಣ ಮಾಡಿದರು.

ಸಭೆಯ ಪ್ರಾರಂಭದಲ್ಲಿ ಮೌಲಾನಾ ಅಬ್ದುಲ್ ಕಲಾಂ ಅಜಾದರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಮೈಸೂರು ಸರಕಾರವು ಮಜೂರ—ರೈತರ ಅನೇಕ ವಿವಾದಗಳನ್ನು ಇನ್ನೂ ಇತ್ಯರ್ಥ ಮಾಡದೆ ಕಾಲ ತಳ್ಳುತ್ತಾ ಬಂದಿದೆ. ಆದುದರಿಂದ ವಿವಾದಗಳನ್ನು ಕೂಡಲೇ ತೀರ್ಮಾನಿಸಲು, ಸ್ಪೆಷ್ಯಲ್ ಕೈಗಾರಿಕಾ ಕೋರ್ಟೊಂದನ್ನು ನೇಮಿಸಬೇಕು. ಬೀಡಿ ಮುತ್ತಿತರ ಕೈಗಾರಿಕೆಗಳಲ್ಲಿ ದುಡಿಯುವ ಮಜೂರರಿಗೆ ಕನಿಷ್ಟ ಮಜೂರಿ ನಿರ್ಣಯಿಸಬೇಕೆಂದೂ, ರೈತರನ್ನು ಒಕ್ಕಲೆಬ್ಬಿಸುವುದನ್ನು ತಡೆದು ಪ್ರಗತಿಶೀಲ ಭೂಸುಧಾರಣಾ ಮಸೂದೆಯನ್ನು ತ್ವರಿತವಾಗಿ ಜ್ಯಾರಿಗೆ ತರಬೇಕೆಂದೂ ಕೇಳಿಕೊಳ್ಳುವ ಮತ್ತು ದ. ಕ. ಜಿಲ್ಲೆಯ ಕಾರ್ಕಳ ಮತ್ತು ಉಡುಪಿ ಮೆಜಿಸ್ಟ್ರೇಟ್ ಕೋರ್ಟುಗಳಲ್ಲಿ ಎ. ಓ. ಸಿ.ಗಳನ್ನು ನೇಮಿಸುವ ವಿಚಾರದಲ್ಲಿ ಸರಕಾರ ರಚಿಸಿರುವ ಕಾನೂನಿನಲ್ಲಿ ಸ್ವಜನ ಪಕ್ಷಪಾತ ನೀತಿಯನ್ನು ಅನುಸರಿಸಲು ಕಾರಣರಾದ ಮಂತ್ರಿಗಳನ್ನೂ ಸರಕಾರಿ ಅಧಿಕಾರಿಗಳನ್ನೂ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಗಳಾದವು.

ಆರಂಭದಲ್ಲಿ ಮಜೂರರ ಮತ್ತು ರೈತರ ಮೆರವಣಿಗೆಯು ನಗರ ಸುತ್ತಾಡಿತು.

ಮೈಸೂರು

ತಾ. 1—3—58ನೇ ಶನಿವಾರ ಸಂಜೆ ಕಾ॥ ಎಸ್. ಸೋಮಸುಂದರ ಶರ್ಮರವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನ ಹಿಂದುಸ್ಥಾನ್ ವಿಮಾನ ಕಾರ್ಖಾನೆ ಕೆಲಸಗಾರರ ಮೇಲೆ ಸರಕಾರವು ಗುಂಡು ಹಾರಿಸಿದುದರ ವೃತ್ತ 144ನೇ ಸೆಕ್ಷನ್ ಜಾರಿ ಮಾಡಿ ಕಾಮ್ರೇಡರನ್ನು ಬಂಧಿಸಿದುದರ ವಿರುದ್ಧ ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಕಾ॥ ಎಂ. ಎನ್. ಉಗ್ರಪ್ಪ, ಕಾ॥ ಸಿ. ಕೆ. ಮೋಹನ್, ಕಾ॥ ಜಿ. ರಂಗನಾಥನ್ ಮತ್ತು ಸ್ವಾಮಿದಾಸ್‌ರವರು ಭಾಷಣ ಮಾಡಿದರು ಮತ್ತು ಈ ಕೆಳಗೆ ಕಂಡ ಠರಾವುಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಕಮ್ಯುನಿಸ್ಟ್ ಪಾರ್ಟಿಯ ನಗರ ಸಮಿತಿಯ ಆಶ್ರಯದಲ್ಲಿ ಏರ್ಪಡಿಸಲ್ಪಟ್ಟಿರುವ ಬಹಿರಂಗಸಭೆಯು, ಬೆಂಗಳೂರು ವಿಮಾನ ಕಾರ್ಖಾನೆಯ ಕೆಲಸಗಾರರ ಮೇಲೆ ಲಾಠಿ ಛಾರ್ಜು, ಗೋಳಿಬಾರನ್ನು ಮಾಡಿರುವ ಮೈಸೂರು ಸರಕಾರವನ್ನು ಉಗ್ರವಾಗಿ ಖಂಡಿಸುತ್ತದೆ ಮತ್ತು ಈ ಬಗೆ ಒಂದು ನಿಷ್ಪಕ್ಷಪಾತ ವಿಚಾರಣೆಯನ್ನು ಏರ್ಪಡಿಸಬೇಕೆಂದು ಒತ್ತಾಯಪಡಿಸುತ್ತದೆ.

ಬೆಂಗಳೂರಿನ ವಿಮಾನ ಕಾರ್ಖಾನೆಯ ಕಾರ್ಮಿಕರ ವಿವಾದದ ಸಂಬಂಧದಲ್ಲಿ ಕೆಲಸದಿಂದ ತೆಗೆದುಹಾಕಿರುವವರೆಲ್ಲರನ್ನೂ, ಸಸ್ಪೆಂಡ್ ಮಾಡಿರುವವರೆಲ್ಲರನ್ನೂ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಮತ್ತು ಕೇಂದ್ರ ಸರಕಾರವು ಕೂಡಲೆ ಮಧ್ಯೆ ಪ್ರವೇಶಿಸಿ ಈ ಕಾರ್ಮಿಕ ವಿವಾದವನ್ನು ಬಗೆಹರಿಸಬೇಕೆಂದು ಒತ್ತಾಯಪಡಿಸುತ್ತದೆ.

ಬೆಂಗಳೂರಿನಲ್ಲಿ ದಸ್ತಗಿರಿ ಮಾಡಿರುವ ಕಾರ್ಮಿಕ ನಾಯಕರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಅವರುಗಳ ಮೇಲೆ ಹಾಕಿರುವ ಮೊಖದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಪೋಲೀಸು ದಬ್ಬಾಳಿಕೆಯನ್ನು ಅಂತ್ಯಗೊಳಿಸಬೇಕೆಂದು ಒತ್ತಾಯಪಡಿಸುತ್ತದೆ.

ಮೈಸೂರು ದಳವಾಯಿ ವಿದ್ಯಾಶಾಲೆಯ ಉಪಾಧ್ಯಾಯರು ನಡೆಸುತ್ತಿರುವ ಅಸಹಕಾರ ಚಳುವಳಿಗೆ ಬೆಂಬಲಕೊಡುತ್ತದೆ ಮತ್ತು ವಿದ್ಯಾಇಲಾಖೆಯ ಅಧಿಕಾರಿಗಳು ಈ ಮಧ್ಯೆ ಪ್ರವೇಶಿಸಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದೂ ಒತ್ತಾಯಪಡಿಸುತ್ತದೆ.

ಸರಕಾರದ ಜನ ವಿರೋಧಿ ನೀತಿಯ ಖಂಡನೆ

ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನದ ಕರೆಯನ್ನು ಅನುಸರಿಸಿ ತಾ 23—2—58ರಂದು ಮೈಸೂರು ಟೌನ್‌ಹಾಲ್ ಮುಂಭಾಗದಲ್ಲಿ ಮುನಿಸಿಪಲ್ ಕೌನ್ಸಿಲರ್ ಸೋಮಸುಂದರ ಶರ್ಮರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಮೊದಲು ಕಾರ್ಮಿಕರ ಮೆರವಣಿಗೆ ನಡೆದಿತ್ತು. ಕಮ್ಯೂನಿಸ್ಟ್ ಪಾರ್ಟಿಯ ಮೈಸೂರು ಶಾಖೆಯ ಕಾರ್ಯದರ್ಶಿ ಎಂ. ಎನ್. ಉಗ್ರಪ್ಪ ಮತ್ತು ಬಿ. ವಿ. ಕಕ್ಕಿಲ್ಲಾಯರು ಮಾತನಾಡಿ, ಸರಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿದರು. ಭೂಸುಧಾರಣೆ ಕೂಡಲೇ ಜಾರಿಯಾಗಬೇಕು, ಕೈಗಾರಿಕಾ ವಿವಾದಗಳನ್ನು ಬೇಗಬೇಗನೆ ಬಗೆಹರಿಸಲು ಎರಡನೆಯ ಟ್ರೈಬ್ಯೂನಲ್ ನೇಮಕವಾಗಬೇಕು, ಮೈಸೂರು ನಗರದಲ್ಲಿ ನೀರಿನ ಅಭಾವವನ್ನು ಪರಿಹರಿಸಲು, ಶ್ರಮಜೀವಿ

(೯ನೇ ಪುಟ ನೋಡಿ)

ಮೈಸೂರು ಸರಕಾರದ ಪ್ರತಿಗಾಮಿ ನೀತಿ ಬದಲಾಗಬೇಕು

ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್, ಕಿಸಾನ್ ಸಭಾ ಮತ್ತು ಕಮ್ಯೂನಿಸ್ಟ್ ಪಾರ್ಟಿ ಕೊಟ್ಟಿರುವ ಕರೆಯಂತೆ ತಾ. 23—2—58ರಂದು, ಮಂಗಳೂರಿನಲ್ಲಿ ಟ್ರೇಡ್ ಯೂನಿಯನ್ ಕೌನ್ಸಿಲ್, ರೈತ ಸಂಘ ಮತ್ತು ಕಮ್ಯೂನಿಸ್ಟ್ ಪಾರ್ಟಿಗಳ ಸಂಯುಕ್ತ ಆಶ್ರಯದಲ್ಲಿ ಮೈಸೂರು ಸರಕಾರದ ನೀತಿಯ ಪ್ರತಿಭಟನಾ ದಿನ ಆಚರಿಸಲಾಯಿತು.

ಸಂಜೆ ಕೇಂದ್ರ ಮೈದಾನಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರಗಿತು. ಸಭಾರಂಭದಲ್ಲಿ ಕೇಂದ್ರ ಸರಕಾರದ ವಿದ್ಯಾ ಮಂತ್ರಿಗಳ ಮರಣಕ್ಕೆ ದುಃಖವನ್ನು ಸೂಚಿಸುವ ಠರಾವನ್ನು ಸಭೆಯು ಎದ್ದುನಿಂತು ಮಂಜೂರು ಮಾಡಿತು. ಹಾಗೆಯೇ ಪಶ್ಚಿಮ ಬಂಗಾಳದ ಅಸನ್ಸೋಲಿನ ಗಣಿಯೊಂದರಲ್ಲಿ ನಡೆದ ದುರಂತದ ಪರಿಣಾಮವಾಗಿ 185 ಮಂದಿ ಮಜೂರ ಬಂಧುಗಳು ಮರಣಕ್ಕೀಡಾದ ದುರ್ಘಟನೆಗೆ ಸಭೆಯು ವಿಷಾದವನ್ನು ವ್ಯಕ್ತಪಡಿಸುವ ಠರಾವನ್ನು ಮಂಜೂರು ಮಾಡಿದೆ. ಮಾತ್ರವಲ್ಲ ಈ ದುರಂತಕ್ಕೆ ಕಾರಣವೇನೆಂಬುದನ್ನು ಯೋಗ್ಯ ವಿಚಾರಣೆ ನಡೆಸಿ ಗೊತ್ತುಮಾಡಬೇಕೆಂದು ಸರಕಾರವನ್ನು ಒತ್ತಾಯಪಡಿಸಿದೆ.

ಮೈಸೂರು ಸರಕಾರ ಇಂದು ಅನುಸರಿಸುತ್ತಿರುವ ನೀತಿಯಿಂದ ರಾಜ್ಯಕ್ಕೆ, ರಾಜ್ಯದ ಜನತೆಗೆ ಹಿತವಾಗುತ್ತಿಲ್ಲವೆಂಬುದನ್ನು ಉದಾಹರಣೆ ಸಹಿತ ವಿವರಿಸಿದರಲ್ಲದೆ ಇಂದಿನ ನೀತಿಯನ್ನು ಕೂಡಲೇ ಬದಲಾಯಿಸಬೇಕೆಂದು ಸರಕಾರವನ್ನು ಒತ್ತಾಯಿಸಿ ಶ್ರೀಯುತರುಗಳಾದ ಎ. ಶಾಂತಾರಾಂ ಪೈ, ಎಂ. ಎಚ್. ಕೃಷ್ಣಪ್ಪ, ಕೆ. ಮೋನಪ್ಪ ಶೆಟ್ಟಿ ಮೊದಲಾದವರು ಭಾಷಣ ಮಾಡಿದರು

ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಆಧಾರದಲ್ಲಿ ಭೂಮಸೂದೆಯೊಂದನ್ನು ಕೂಡಲೇ ಜ್ಯಾರಿಗೆ ತರಬೇಕು. ರಾಷ್ಟ್ರ ಪುನರ್‌ನಿರ್ಮಾಣ ಕಾರ್ಯಗಳಿಗೆ ಸಂಬಂಧಿಸಿ ಸರಕಾರ ರಚಿಸುವ ಎಲ್ಲಾ ಸಮಿತಿಗಳಲ್ಲೂ ಎಲ್ಲಾ ಪಕ್ಷಗಳಿಗೆ ಸಮಾನ ಪ್ರಾತಿನಿಧ್ಯ ಕೊಡಬೇಕು. ಗೇರುಬೀಜ ಕಾರ್ಖಾನೆಗಳನ್ನು ಕೂಡಲೇ ಸರ್ವಋತು ಕಾರ್ಖಾನೆಗಳೆಂದು ಸಾರಬೇಕು. ಬೀಡಿ ಕೈಗಾರಿಕೆಯ ಮಾಲಕ—ಮಜೂರ ಸಂಬಂಧವನ್ನು ವ್ಯವಸ್ಥಿತಗೊಳಿಸುವ ಕಾನೂನೊಂದನ್ನು ಕೂಡಲೇ ಜ್ಯಾರಿಗೊಳಿಸಬೇಕು. ಎರಡನೇ ಟ್ರೈಬ್ಯೂನಲನ್ನು ರಚಿಸಬೇಕು ಎಂದು ಸರಕಾರವನ್ನು ಒತ್ತಾಯಿಸುವ ಠರಾವನ್ನು ಸಭೆಯಲ್ಲಿ ಮಂಜೂರು ಮಾಡಲಾಯಿತು.

ರೈತರಂಗ

ದೊಡ್ಡಬಳ್ಳಾಪುರ

ತಾಲ್ಲೂಕು ರೈತರ ಪ್ರಥಮ ಸಭೆಯು ತಾ. 26—2—58ರ ಬುಧವಾರ ಪ್ರವಾಸಿ ಮಂದಿರದ ಬಳಿ ನಡೆಯಿತು. ತಾಲ್ಲೂಕಿನಾದ್ಯಂತ ಬಂದಿದ್ದ ರೈತರ ಸಭೆಯು ತಾಲ್ಲೂಕಿನಲ್ಲಿ ರೈತರ ಚಳುವಳಿಯನ್ನು ಹರಡಲು ನಿರ್ಧರಿಸಿ ಆದಕ್ಕಾಗಿ ಶ್ರೀ ಹೆಚ್. ಮುಗುವಾಳಪ್ಪನವರನ್ನು ಸಂಚಾಲಕರನ್ನಾಗಿ ಒಳಗೊಂಡ ಸಂಘಟನಾ ಸಮಿತಿಯನ್ನು ರಚಿಸಿತು.

ಕರ್ನಾಟಕ ಪ್ರಾಂತ ರೈತ ಸಂಘದ ಉಪಕಾರ್ಯದರ್ಶಿ ಶ್ರೀ ಸಿ. ರಾಮಭದ್ರಯ್ಯನವರು ನವಂಬರ್ 16, 17-57ರಂದು ನಡೆದ ಕರ್ನಾಟಕ ರೈತ ಸಮ್ಮೇಳನದ ನಿರ್ಣಯಗಳನ್ನು ಸಭೆಯಲ್ಲಿ ವಿವರಿಸಿ ಪುರೋಗಾಮಿ ಭೂಸುಧಾರಣೆಗೆ ಜನತೆ ಬೆಂಬಲ ನೀಡಬೇಕೆಂದು ಕೇಳಿಕೊಂಡರು. ಸಭೆಯಲ್ಲಿ ಶ್ರೀ ಡಿ. ವಿ. ಗಂಗಾಧರ್, ಶ್ರೀ ಬೈರ ಹನುಮಯ್ಯ, ಶ್ರೀ ಮುಗುವಾಳಪ್ಪ ಮತ್ತಿತರರು ಮಾತನಾಡಿದರು. ಜತ್ತಿ ಸಮಿತಿಯ ವರದಿಯ ರೈತ ವಿರೋಧೀ ಸಲಹೆಗಳನ್ನು ಸಭೆಯು ಖಂಡಿಸಿತು.

ಮತ್ತು ಈಗಾಗಲೆ ರೈತರು ಸಹಿನೀಡಿರುವ ಕಂದಾಯ ಮಾಫಿ ಮನವಿಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಯಿತು. ತಾಲ್ಲೂಕಿನ ಜೋಡಿಗ್ರಾಮಗಳಲ್ಲಿ ಜೋಡಿದಾರರು ನಡೆಸುತ್ತಿರುವ ಒಕ್ಕಲೆಬ್ಬಿಸುವ ನೀತಿಗೆ ಸರ್ಕಾರ ಪರೋಕ್ಷವಾಗಿ ಬೆಂಬಲ ನೀಡುತ್ತಿರುವ ಬಗ್ಗೆ ಸಭೆಯು ವಿಷಾದ ವ್ಯಕ್ತಪಡಿಸಿ ಅವರಿಗೆ ರಕ್ಷಣೆ ನೀಡಬೇಕೆಂದು ಸರಕಾರವನ್ನು ಕೋರಲಾಯಿತು.

ತಾಲ್ಲೂಕಿನ ರೈತರ ಉಪಕಸುಬಾದ ಸೌದೆ ಮಾರುವವರ ಬಗ್ಗೆ ಅರಣ್ಯ ಇಲಾಖೆಯವರು ನೀಡುತ್ತಿರುವ ತೊಂದರೆಗಳನ್ನು ಖಂಡಿಸಿ ಹಾಲಿ ಲೈಸನ್ಸ್‌ನ್ನು ಮೂರು ದಿನಗಳವರೆವಿಗೆ ಮಂಜೂರು ಮಾಡಬೇಕೆಂದು ಕೋರಲಾಯಿತು.

ಭಾರೀ ಬಹಿರಂಗ ಸಭೆ

ಸಾಯಂಕಾಲ ಆಸ್ಪತ್ರೆ ಮೈದಾನದಲ್ಲಿ ಬಹಿರಂಗ ಸಭೆಗೆ ಶ್ರೀ ಡಿ. ವಿ. ಗಂಗಾಧರ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಉಪಕಾರ್ಯದರ್ಶಿ ಸಿ. ರಾಮಭದ್ರಯ್ಯನವರು ಮಾತಾಡುತ್ತ ಕೇರಳ ಸರ್ಕಾರ ಅಧಿಕಾರಕ್ಕೆ ಬಂದ ಅನತಿ ಕಾಲದಲ್ಲೇ ಕೈಗೊಂಡ ರೈತಹಿತ ಕಾನೂನು ಮತ್ತು ಭೂಸುಧಾರಣೆಗಳನ್ನು ವಿವರಿಸಿ ಕಾಂಗ್ರೆಸ್ ಸರ್ಕಾರದ ನಿಧಾನ ನೀತಿಯನ್ನು ಖಂಡಿಸಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಗಳನ್ನು ಸರಿಯಾದ ಹತೋಟಿಯಲ್ಲಿಡಲು ಕಾಂಗ್ರೆಸ್ ಸರ್ವಾಧಿಕಾರದಿಂದ ವಿಮುಕ್ತಿ ಕೊಡಲು ಪ್ರಗತಿಪರ ವಿರೋಧಪಕ್ಷ ಕಟ್ಟಲು ಜನತೆ ಮುಂದೆ ಬರಬೇಕೆಂದೂ, [illegible]ತಿಯಲ್ಲಿ ರಾಜಕೀಯ ಜಾಗೃತಿ ಬೆಳೆದಿ[illegible] ಕಾರಣ ಅವನ್ನು [illegible]ದ ರೀತಿಯಲ್ಲಿ ಉಪಯೋಗಿಸಬೇಕೆಂದೂ ಕೇಳಿಕೊಂಡರು. ಬಹಿರಂಗ ಸಭೆಗೆ ರೈತ [illegible] ಕಾರ್ಮಿಕರಿಂದಿಯಾಗಿ ನಾಲ್ಕು ಸಾವಿರಕ್ಕೂ ಮೇಲ್ಪಟ್ಟು ಜನ ನೆರೆದಿದ್ದರು. ಮೂವತ್ತು ವರ್ಷಗಳ ಕಾಲ ಅಖಂಡ ಸೇವೆಸಲ್ಲಿಸಿದ್ದ ಕಾಂಗ್ರೆಸ್ಸಿನ ನಾಯಕರಾದ ಶ್ರೀ ಮುಗುವಾಳಪ್ಪನವರು ಕೊನೆಯಲ್ಲಿ ಮಾತನಾಡಿ ತಾವು ಕಾಂಗ್ರೆಸ್ಸನ್ನು ತ್ಯಜಿಸಿರುವ ಕಾರಣಗಳನ್ನು ಜನತೆಗೆ ವಿವರಿಸಿ "ಬಂಡವಾಳಗಾರರಿಂದ ಆವೃತವಾಗಿರುವ ಸಂಸ್ಥೆಯು ಜನತಾ ಪಕ್ಷವಾಗಿ ಮುಂದುವರಿಯುವುದರಲ್ಲಿ ಅಪನಂಬಿಕೆಯುಂಟಾಗಿರುವುದರಿಂದ ತಮ್ಮ ಸಹಚರರೊಡನೆ ಆ ಪಕ್ಷವನ್ನು ತ್ಯಜಿಸಿರುವುದಾಗಿಯೂ ತಿಳಿಸಿದರು. ರಾಷ್ಟ್ರಗೀತೆ ಮತ್ತು ಕಾರ್ಮಿಕ ವರ್ಗದ ಜಯಕಾರಗಳೊಡನೆ ಸಭೆ ಮುಕ್ತಾಯವಾಯಿತು

ತೊಕ್ಕೊಟ್ಟು

ತಾ. 18—2—58ರಂದು ಉಳ್ಳಾಲ ಗ್ರಾಮದ ತೊಕ್ಕೊಟ್ಟು ಎಂಬಲ್ಲಿ ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆಯು ಶ್ರೀ ಪಿಲಾರು ಸಂಕಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯ ಉದ್ದೇಶವನ್ನು ಶ್ರೀ ಯು. ಜನಾರ್ಧನ ನ್ಯಾಕರು ವಿವರಿಸಿದರು. ನಂತರ ಶ್ರೀಗಳಾದ ಕೆ. ನಾರಾಯಣ ನ್ಯಾಕ್, ಕೆ. ನಾರಾಯಣ ಶೆಟ್ಟಿ, ಯು. ನಾರಾಯಣ ಸುಲಾಯ, ಬಿ. ಕೊರಗಪ್ಪ ರೈ ಮೊದಲಾದವರು ಸಭೆಯಲ್ಲಿ "ಭೂಸುಧಾರಣಾ" ಶಾಸನವು ಕೂಡಲೇ ಜ್ಯಾರಿಗೊಳಿಸಬೇಕಾದ ಆವಶ್ಯಕತೆಯ ಕುರಿತು ಭಾಷಣವಿತ್ತರಲ್ಲದೆ, ಇದಕ್ಕಾಗಿ ರೈತರು ಬಲವಾದ ಒಗ್ಗಟ್ಟಿನಿಂದ ಸಭೆ, ಮೆರವಣಿಗೆ, ಪ್ರದರ್ಶನಗಳ ಮೂಲಕ ಸರಕಾರವನ್ನು ಒತ್ತಾಯಿಸಬೇಕೆಂದು ಕೇಳಿಕೊಂಡರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್ಲಾ ರೈತರೂ ರೈತಸಂಘದ ಸದಸ್ಯರಾಗಬೇಕೆಂದು ವಿನಂತಿಸಿಕೊಂಡರು. ಯು. ಜನಾರ್ಧನ ನ್ಯಾಕರು ಧನ್ಯವಾದವಿತ್ತರು.

ರೈತರ ಸಭೆಗಳು

ಕೋಟೆಕಾರ್

ತಾ. 19—2—58ರಂದು ಸಂಜೆ ಗ. 7ಕ್ಕೆ ಕೋಟೆಕಾರು ಗ್ರಾಮದ ಮಾಡೂರು ಎಂಬಲ್ಲಿ ಜಿಲ್ಲಾ ರೈತಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆ ಜರಗಿತು. ಸಭೆಯ ಅಧ್ಯಕ್ಷ ಸ್ಥಾನವನ್ನು ಗ್ರಾಮದ ರೈತ ಸಮಿತಿಯ ಅಧ್ಯಕ್ಷ ಶ್ರೀ ಎಂ. ತ್ಯಾಂಪಣ್ಣ ಶೆಟ್ಟಿ ಇವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಬಿ. ಕೃಷ್ಣದಾಸ್ ಇವರು ಸಭೆಯ ಉದ್ದೇಶ ಮತ್ತು ಗ್ರಾಮದಲ್ಲಿ ರೈತರು ಮಾಡಬೇಕಾದ ಕರ್ತವ್ಯಗಳನ್ನು ವಿವರಿಸಿದರು. ಅನಂತರ ಗ್ರಾಮ ಸಮಿತಿಯ ಕಾರ್ಯದರ್ಶಿ ಶ್ರೀ ಕೆ.ಬಿ. ಲೋಕಯ್ಯನವರು ರೈತರ ಮುಂದಿರುವ ಸಮಸ್ಯೆಗಳ ಕುರಿತು ಭಾಷಣ ಮಾಡಿದರು. ಶ್ರೀ ಕೊರಗಪ್ಪ ರೈಯವರು ಜತ್ತಿ ಸಮಿತಿಯ ವರದಿಯಲ್ಲಿರುವ ಲೋಪದೋಷಗಳನ್ನು ತೆಗೆದುಹಾಕಿ ಕರ್ನಾಟಕ ಪ್ರಾಂತ ರೈತಸಮಿತಿಯ ಸೂಚನೆಯಂತೆ ಸರಕಾರವು ಯೋಗ್ಯ ಭೂಸುಧಾರಣಾ ಕಾನೂನನ್ನು ಜ್ಯಾರಿಗೊಳಿಸಬೇಕೆಂದು ಕೇಳಿಕೊಂಡರು. ಮುಂದುವರಿಯುತ್ತಾ, ಇದೇ ತಾ. 23-2-58 ರಂದು ಮಂಗಳೂರು ಕೇಂದ್ರ ಮೈದಾನಿನಲ್ಲಿ ಜರಗುವ ಸಾರ್ವಜನಿಕ ಸಭೆಗೆ ರೈತರೆಲ್ಲರೂ ಸಭೆ-ಮೆರವಣಿಗೆಳಗಲ್ಲಿ ಬಂದು ಭಾಗವಹಿಸಬೇಕೆಂದು ರೈತರನ್ನು ವಿನಂತಿಸಿಕೊಂಡರು. ಶ್ರೀ ಯು. ಜನಾರ್ಧನ ನ್ಯಾಕರು ರೈತರ ಒಗ್ಗಟ್ಟಿನ ಅವಶ್ಯಕತೆಯ ಕುರಿತಾಗಿ ಮಾತಾಡಿದರು. ಸಭೆಯಲ್ಲಿ ಕೂಡಲೇ ಯೋಗ್ಯ ಭೂಸುಧಾರಣಾ ಶಾಸನವನ್ನು ಜ್ಯಾರಿಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ಠರಾವುಗಳು ಪಾಸಾದವು.

ಕೋಣಾಜೆ

ತಾ. 20—2—58ರಂದು ಸಂಜೆ ಗಂಟೆ 7ಕ್ಕೆ ಕೋಣಾಜೆ ಗ್ರಾಮದ ರೈತರ ಸಭೆಯು ಶ್ರೀ ರೈಮಾದ್ ಸೋಜರ ಅಧ್ಯಕ್ಷತೆಯಲ್ಲಿ ಜರಗಿತು ಸಭೆ ಕರೆದ ಉದ್ದೇಶವನ್ನು ಶ್ರೀ ಬಿ. ಎ. ಮಮ್ಮಿಯವರು ವಿವರಿಸಿದರು. ನಂತರ ಶ್ರೀಗಳಾದ ಕೆ. ನಾರಾಯಣ ನ್ಯಾಕ್, ಬಿ. ಕೊರಗಪ್ಪ ರೈ, ಟಿ. ಮುದರ ನ್ಯಾಕ ಮೊದಲಾದವರು ರೈತರ ಒಗ್ಗಟ್ಟಿನ ವಿಷಯವಾಗಿಯೂ, ಸರಕಾರವು ಕೂಡಲೇ ಒಕ್ಕಲುಗಳ ಹಿತರಕ್ಷಣೆಯಾಗುವ ಯೋಗ್ಯ ಕಾನೂನನ್ನು ಜ್ಯಾರಿಗೊಳಿಸಬೇಕೆಂದು ಸಭೆಯಲ್ಲಿ ಕೇಳಿಕೊಂಡರು. ಇದಕ್ಕೆ ಸಂಬಂಧಿಸಿದ ಠರಾವೊಂದನ್ನು ಸಭೆಯಲ್ಲಿ ಪಾಸು ಮಾಡಲಾಯಿತು. ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ನಗೇನ ಹಳ್ಳಿ

ಮೈಸೂರು ಪಟ್ಟಣದ ಸಮೀಪವಿರುವ ನಗೇನ ಹಳ್ಳಿಯ ರೈತರ ಬಹಿರಂಗ ಸಭೆಯು ತಾ.24—2—58ರಂದು ಸಂಜೆ 6 ಗಂಟೆಗೆ ಕ್ಯಾತನಹಳ್ಳಿ ಶ್ರೀ ಚಿಕ್ಕತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಂ. ಎನ್. ಉಗ್ರಪ್ಪ, ಬಿ. ವಿ. ಕಕ್ಕಿಲ್ಲಾಯ ಹಾಗು ಶ್ರೀರಂಗಪಟ್ಟಣದ ಮಾಜೀ ಪಟೇಲ ಶ್ರೀ ಬೋರೇಗೌಡರು ಭೂಸುಧಾರಣೆಯ ಅವಶ್ಯಕತೆಯನ್ನು ವಿವರಿಸಿ, ರೈತರು ಸಂಘಟಿತರಾಗಬೇಕೆಂದು ಕೇಳಿಕೊಂಡರು.

ಬಾಳೆಪುಣಿ ಗ್ರಾಮ

ತಾ. 16—2—58ರಂದು ಬಾಳೆಪುಣಿ ಗ್ರಾಮದ ಪೂವಾಡಿಕಲ್ಲಿನಲ್ಲಿ ಶ್ರೀ ಬಿ. ಕೊರಗಪ್ಪ ರೈಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಇರಾ ರಾಮ ಪೂಜಾರಿ, ಎ. ಕೃಷ್ಣಶೆಟ್ಟಿ, ಎಂ. ಎಚ್. ಕೃಷ್ಣಪ್ಪ ಮತ್ತು ತೋಟಾರ್ ಹಮ್ಮಬ್ಬ ಬ್ಯಾರಿಯವರು ರೈತರು ಒಗ್ಗಟ್ಟಾಗಿ ಒಕ್ಕಲು ಹಿತರಕ್ಷಣೆಗಾಗಿ ಚಳವಳಿ ನಡೆಸುವ ಅವಶ್ಯಕತೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ನೆರೆಯ ಭೂಮಾಲಕರ ಕಿರುಕುಳಗಳನ್ನು ಖಂಡಿಸಿದರಲ್ಲದೆ ಸರಕಾರ ಈ ಬಗ್ಗೆ ರೈತರ ರಕ್ಷಣೆಗೆ ಮುಂದಾಗಬೇಕೆಂದು ವಿನಂತಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಕೇಳಿಕೆಯ ಮೇರೆಗೆ ನ್ಯಾಯ ಗೇಣಿ ನಿರ್ಣಯಿಸಿ, ಒಕ್ಕಲೆಬ್ಬಿಸುವುದನ್ನು ಸಂಪೂರ್ಣ ಪ್ರತಿಬಂಧಿಸುವ ಯೋಗ್ಯ ಒಕ್ಕಲು ಹಿತಕಾಯಿದೆಯನ್ನು ಕೂಡಲೇ ಜ್ಯಾರಿಗೊಳಿಸುವಂತೆ ಮೈಸೂರು ಸರಕಾರವನ್ನು ಒತ್ತಾಯಿಸುವ ನಿರ್ಣಯವು ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ರೈತಸಂಘದ ಬಾಳೆಪುಣಿ ಗ್ರಾಮಶಾಖೆಯ ಕಾರ್ಯದರ್ಶಿ ಶ್ರೀ ಬಿ. ವೆಂಕಟ್ರಮಣ ಆಚಾರಿಯವರು ಧನ್ಯವಾದವಿತ್ತ ಬಳಿಕ ಸಭೆ ಮುಕ್ತಾಯವಾಯಿತು.

ಕಾರ್ಮಿಕರ ಮತ್ತು ರೈತರ ಭಾರಿ ಪ್ರತಿಭಟನಾ ಸಭೆ

ತಾ. 28—2—58ರ ಸಂಜೆ 6 ಘಂಟೆಗೆ ಬೆಂಗಳೂರು ತುಮಕೂರು ರೋಡ್ ದಾಸರಹಳ್ಳಿ 9ನೇ ಮೈಲು ಕಲ್ಲಿನ ಹತ್ತಿರ, ಮೈಸೂರು ಸರಕಾರದ ದಬ್ಬಾಳಿಕಾ ನೀತಿಯನ್ನು ಪ್ರತಿಭಟಿಸಿ, ಬೆಂಗಳೂರು ಉತ್ತರ ತಾಲ್ಲೂಕು ರೈತರು ಮತ್ತು ಪ್ಲೈವುಡ್ ಫ್ಯಾಕ್ಟರಿ, ಹ್ಯೂಮ್ ಪೈಪ್, ಬಿ ಸಿ ಎಂ. ಮಹಾಲಕ್ಷ್ಮಿ ಮಿಲ್, ಟೈಲ್ ಫ್ಯಾಕ್ಟರಿ, ಸ್ಟೋನ್‌ವೇರ್ ಪೈಪ್ಸ್ ಫ್ಯಾಕ್ಟರಿ ಮತ್ತು ಇತರ ಎಲ್ಲಾ ಫ್ಯಾಕ್ಟರಿಯ ಕೆಲಸಗಾರರ ಸಭೆ ಬಿ. ಟಿ. ವಿ ರಾಜಣ್ಣನವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯಲ್ಲಿ ಕಾರ್ಮಿಕ ಮುಖಂಡರು ಮತ್ತು ರೈತ ಮುಖಂಡರುಗಳಾದ ಐ. ಮರಿದಾಸ್, ರಂಗರಾಜ್, ಆನಂದ್, ಮತ್ತು ಇತರರು ಭಾಷಣ ಮಾಡಿದರು ನಂತರ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು:

- ನಗರದಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿರುವುದನ್ನು ತಕ್ಷಣ ತೆಗೆಯಬೇಕು.
- 25—2—58ರಂದು ಹೆಚ್. ಎ. ಎಲ್. ಕೆಲಸಗಾರರ ಮೇಲೆ ದಬ್ಬಾಳಿಕೆಯಲ್ಲಿ ಪೋಲೀಸ್‌ನವರು ವಿನಾಕಾರಣ ಗೋಲಿಬಾರ್ ಮಾಡಿದ್ದನ್ನು ಸಭೆಯು ತೀವ್ರವಾಗಿ ಖಂಡಿಸುತ್ತದೆ. ಮತ್ತು ಕೂಡಲೆ ಗೋಲಿಬಾರ್, ಲಾಠಿ ಛಾರ್ಜುಗಳ ಬಗ್ಗೆ ಬಹಿರಂಗ ವಿಚಾರಣೆ ನಡೆಸಿ ನ್ಯಾಯ ದೊರಕಿಸಿಕೊಡಬೇಕು.
- ಹೆಚ್. ಎ. ಎಲ್. ಲಾಕೌಟ್ ಮಾಡಿರುವುದನ್ನು ಕೂಡಲೇ ತೆಗೆಯಬೇಕು.
- ಹೆಚ್. ಎ. ಎಲ್. ನೌಕರ ವರ್ಗದಲ್ಲಿ ಸತ್ತವರ ಕುಟುಂಬಕ್ಕೆ ತಕ್ಷಣ ಸರಕಾರ ಪರಿಹಾರ ಕೊಡಬೇಕು.
- ಹೆಚ್. ಎ. ಎಲ್. ಮತ್ತು ಇತರೇ ಫ್ಯಾಕ್ಟರಿಗಳ ಕೆಲಸಗಾರರ ಮೇಲೆ ಪೋಲಿಸ್ ಕೇಸ್‌ಗಳು ಹಾಕಿರುವುದನ್ನು ವಾಪಸ್ ತೆಗೆದುಕೊಳ್ಳಬೇಕು. ಮತ್ತು ಕೆಲಸದಿಂದ ಕಿತ್ತುಹಾಕಿರುವ ಎಲ್ಲಾ ಕೆಲಸಗಾರರನ್ನು ತಕ್ಷಣ ಕೆಲಸಕ್ಕೆ ಹಿಂತೆದುಕೊಳ್ಳಬೇಕು.

ಸಭೆಯಲ್ಲಿ ಹೆಚ್. ಎ ಎಲ್. ನೌಕರ ವರ್ಗದಲ್ಲಿ ಗೋಲಿಬಾರ್‌ನಿಂದ ಸತ್ತವರಿಗೆ ಸಂತಾಪ ಸೂಚಿಸಲಾಯಿತು. ಘೋಷಣೆಗಳೊಡನೆ ಸಭೆಯು ಮುಕ್ತಾಯವಾಯಿತು.

ಪ್ರತಿಭಟನಾ ದಿನಾಚರಣೆ

(೬ನೇ ಪುಟದಿಂದ)

ಬೇಕು, ಆಹಾರದ ಕೊರತೆಯಿಂದ ಜನರನ್ನು ಕಾಪಾಡಲು ಸರಕಾರ ಗಮನಕೊಡಬೇಕು, ಕ್ಷಾಮ ಪ್ರದೇಶಗಳಲ್ಲಿ ಪರಿಹಾರ ಕ್ರಮಕೈಗೊಳ್ಳಬೇಕು ಎಂದು ಮುಂತಾಗಿ ಭಾಷಣಗಾರರು ಸರಕಾರವನ್ನು ಕೇಳಿಕೊಂಡರು.

ಸಭೆಯ ಆರಂಭದಲ್ಲಿ, ಅಧ್ಯಕ್ಷರು ಕೇಳಿಕೊಂಡಂತೆ, ಸಭಿಕರೆಲ್ಲರೂ ಎರಡುನಿಮಿಷ ಮೌನವಾಗಿ ಎದ್ದು ನಿಂತು ಮೌಲಾನಾ ಆಜಾದ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಕಾಳಿಂಗ ರಾವ್ ಪಾರ್ಟಿಯ ಮೋಹನ್ ಕುಮಾರಿ, ಸೋಹನ್ ಕುಮಾರಿಯರ ಜಾನಪದ ಗೀತಗಳೊಡನೆ ಸಭೆ ಆರಂಭವಾಗಿದ್ದು, ಅಧ್ಯಕ್ಷರ ಭಾಷಣ ಹಾಗೂ ಧನ್ಯವಾದಗಳೊಂದಿಗೆ ಮುಕ್ತಾಯವಾಯಿತು.

ಹರಿಹರ

ಸರಕಾರದವರು ಕಾರ್ಮಿಕರ ಬಗ್ಗೆ ಅನುಸರಿಸುತ್ತಿರುವ ಕಾರ್ಮಿಕರ ವಿರೋಧಿ ನೀತಿಯನ್ನು ಪ್ರತಿಭಟಿಸುವುದಕ್ಕಾಗಿ ತಾ. 23-2-58ರಂದು ಮೈಸೂರು ಕಿರ್ಲೋಸ್ಕರ ಕಂಪೆನಿಯ ಕಾರ್ಮಿಕರು ಸಾಯಂಕಾಲ 5-30ಕ್ಕೆ ಗಾಂಧಿ ಮೈದಾನದಲ್ಲಿ, ಸಂಘದ ಅಧ್ಯಕ್ಷರಾದ ಶ್ರೀ ಎಂ. ಸಿ. ನರಸಿಂಹನ್, ಎಂ.ಎಲ್.ಎ. ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಸಭೆಯಲ್ಲಿ ಶ್ರೀ ರು ದ್ರಪ್ಪ, ಶ್ರೀ ವಾಟ್ವೆ ಇವರು ಮಾತಾಡಿದರು. ನಂತರ ಅಧ್ಯಕ್ಷರು ಮಾತನಾಡುತ್ತಾ: ಸರಕಾರದವರು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವುದರ ಬದಲಾಗಿ ಹೊಂದಿರುವ ತಿರಸ್ಕಾರ ಮನೋಭಾವ, ವಿಳಂಬಕಾರಕ ನೀತಿ ಮತ್ತು ಕಾರ್ಮಿಕರ ಚಳುವಳಿಯನ್ನು ಹತ್ತಿಕ್ಕಲು ಅಕ್ರಮವಾಗಿ ಪೋಲೀಸರನ್ನು ಉಪಯೋಗಿಸಿ, ಟ್ರೇಡ್ ಯೂನಿಯನ್ ಚಳುವಳಿಗೆ ಹೇಗೆ ಅಡ್ಡಿ ಆತಂಕಗಳನ್ನು ಉಂಟುಮಾಡುತ್ತಾರೆಂಬುದರ ಬಗ್ಗೆ ಸರ್ಕಾರದವರೇ ನಡೆಸುತ್ತಿರುವ, ಹಿಂದುಸ್ತಾನ ವಿಮಾನ ಕಾರ್ಖಾನೆ, ಕೋಲಾರದ ಚಿನ್ನದ ಗಣಿ ಕಾರ್ಮಿಕರ ಮತ್ತು ಬೆಂಗಳೂರು, ಮಂಗಳೂರು, ಕೊಡಗು, ಹರಿಹರ, ಮತ್ತಿತರ ಪ್ರದೇಶಗಳ ಕಾರ್ಮಿಕರ ಬಗ್ಗೆ ಅನುಸರಿಸುತ್ತಿರುವ, ಕಾರ್ಮಿಕ ವಿರೋಧಿ ನೀತಿಯನ್ನು ದೃಷ್ಟಾಂತಗಳೊಂದಿಗೆ ಸುದೀರ್ಘವಾಗಿ ಸುಮಾರು ಒಂದೂವರೆ ಘಂಟೆ ಭಾಷಣ ಮಾಡಿ, ಸರಕಾರದವರು ಕಾರ್ಮಿಕರ ಬಗ್ಗೆ ಅನುಸರಿಸುತ್ತಿರುವ ಧೋರಣೆಯನ್ನು ಬದಲಾಯಿಸಬೇಕೆಂದು ಸಭೆಯ ಪರವಾಗಿ ಒತ್ತಾಯಿಸುತ್ತಾ ಭಾಷಣ ಮುಕ್ತಾಯ ಮಾಡಿದರು. ನಂತರ ಸಂಘದ ಕಾರ್ಯದರ್ಶಿಯವರ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

ಹಿಂದಿನ ದಿನ ತಾ. 22ರಂದು ಸಂಜೆ ಕಾರ್ಮಿಕರೆಲ್ಲ ಮೆರವಣಿಗೆಯಲ್ಲಿ ಹೊರಟು, (1) 2ನೇ ಕೈಗಾರಿಕಾ ಕೋರ್ಟ್ ಕೂಡಲೇ ರಚಿಸಬೇಕೆಂಬ (2) ವೇಜ್ ಬೋರ್ಡ್ ಸ್ಥಾಪಿಸಬೇಕೆಂಬ (3) ಟ್ರೇಡ್ ಯೂನಿಯನ್ ಕಾರ್ಯಕರ್ತರ ಮೇಲಿರುವ ಎಲ್ಲ ಕೇಸುಗಳು ವಾಪಸಾಗಲೆಂಬ (4) ಹಿಂದುಸ್ತಾನ ವಿಮಾನ ಕಾರ್ಮಿಕರ ಹೋರಾಟ ಯಶಸ್ವಿಯಾಗಲೆಂಬ (5) ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಬದಲಾಗಲೆಂಬ ಘೋಷಣೆ ಮಾಡುತ್ತಾ ಊರಿನ ಪ್ರಮುಖ ಬೀದಿಗಳಲ್ಲಿ ಹೋಗಿ ಬಂದರು.

ತಾ.23ರಂದು ಬೆಳಗ್ಗೆ ಕಾರ್ಮಿಕರು ಸೈಕಲ್ ಮೆರವಣಿಗೆ ತೆಗೆದು ಮೇಲ್ಕಂಡ ಘೋಷಣೆ ಮಾಡುತ್ತ ಊರೆಲ್ಲಾ ಸುತ್ತಾಡಿದರು.

ಗುಲ್ಬರ್ಗಕ್ಕೆ ಇಂಜನಿಯರಿಂಗ್ ಕಾಲೇಜ್

ಗುಲ್ಬರ್ಗದಲ್ಲಿ ಬರುವ ಜೂನಿನಿಂದ ಇಂಜನಿಯರಿಂಗ್ ಕಾಲೇಜು ಆರಂಭವಾಗುವುದೆಂದು ವರದಿಯಾಗಿದೆ.

ಈಗಾಗಲೇ ಸರಕಾರ ನಿಯೋಜಿಸಿದ ರೀತ್ಯಾ ರೂ. 5 ಲಕ್ಷದ ನಿಧಿಯಲ್ಲಿ ರೂ 2 ಲಕ್ಷದಷ್ಟು ಸಂಗ್ರಹವಾಗಿದೆ. ಬರುವ ತಿಂಗಳಾಂತ್ಯದಲ್ಲಿ ಎಲ್ಲಾ ಹಣವನ್ನು ಕೂಡಿಸಲಾಗುವುದೆಂದು ತಿಳಿದು ಬಂದಿದೆ.

ವಿಮಾನ ಕಾರ್ಖಾನೆ ನೌಕರರಿಗೆ ನ್ಯಾಯ ದೊರಕಲಿ

(೧ನೇ ಪುಟದಿಂದ)

ಒಂದೊಂದು ಬಸ್ಸಿಗೂ ಸಶಸ್ತ್ರ ಪೋಲೀಸರನ್ನು ಹಾಕಿ ನೌಕರರ ಮನೆ ಮನೆಗೆ ಸೂಪರ್‌ವೈಸರುಗಳು ಹೋಗಿ ಬೆದರಿಸಿ ಕೆಲಸಕ್ಕೆ ತರಲು ಯತ್ನಿಸಲಾಗುತ್ತಿದೆ. ಸರಕಾರ ಇಂಥ ದೌರ್ಜನ್ಯಕ್ಕೆ ನೆರವು ನೀಡುತ್ತಿರುವುದು ಖಂಡನೀಯವಾಗಿದೆ.

ಸರಕಾರವು ಕೂಡಲೇ ಎಲ್ಲ ಪೋಲೀಸು ಕೇಸುಗಳನ್ನು ಹಿಂತೆಗೆದುಕೊಂಡು, ಸಂಘದ ಪ್ರತಿನಿಧಿಗಳನ್ನು ಮ್ಯಾನೇಜ್‌ಮೆಂಟಿನ ಪ್ರತಿನಿಧಿಗಳನ್ನು ಕರೆಸಿ ಸಂಧಾನ ನಡೆಸಿ ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವುದು ಅಗತ್ಯವಾಗಿದೆ. ವಿಮಾನ ಕಾರ್ಖಾನೆ ನೌಕರರ ಸಂಘದ ನಾಯಕರುಗಳ ಮೇಲೆ ಪೋಲೀಸು ವಾರಂಟುಗಳು ಇರುವುದರಿಂದಾಗಿ ಅವರು ನೇರವಾಗಿ ಮಾತುಕತೆ ನಡೆಸಲಿಕ್ಕೂ, ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲಿಕ್ಕೂ ಕಷ್ಟವಾಗಿದೆ. ಕೈಗಾರಿಕಾ ವಿವಾದದಲ್ಲಿ ಪೋಲೀಸು ಪ್ರವೇಶದಿಂದ ಈ ಬಗೆಯ ತೊಡಕುಗಳು ಸಂಭವಿಸಿವೆ. ಸರಕಾರವು ವಿಮಾನ ಕಾರ್ಖಾನೆ ಮಾಲಿಕರಿಗೆ ಪೋಲೀಸರ ನೆರವನ್ನು ಕೊಟ್ಟಿರುವುದನ್ನು ಹಿಂತೆಗೆದುಕೊಳ್ಳಬೇಕು.

ವಿಮಾನ ಕಾರ್ಖಾನೆಯ ಮ್ಯಾನೇಜ್‌ಮೆಂಟಿನವರು ಶಾಂತ ವಾತಾವರಣ ಕಲ್ಪಿಸಲು ಅನುಕೂಲವಾಗುವಂತೆ ವರ್ತಿಸಲು ಸರ್ಕಾರ ಒತ್ತಾಯ ತರಬೇಕು. ನೌಕರರ ಸಂಘದವರು ಇಟ್ಟಿರುವ ಬೇಡಿಕೆಗಳು ನ್ಯಾಯ ಸಮ್ಮತವಾದುದಾಗಿವೆ. ಕೆಲಸದಿಂದ ತೆಗೆದು ಹಾಕಲಾಗಿರುವ 15 ಮಂದಿಯನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ, ಸಸ್ಪೆಂಡ್ ಆಗಿರುವ 15 ಮಂದಿಯ ಮೇಲೆ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದೂ, ಎಲ್ಲ ಪೋಲೀಸು ಕೇಸುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದೂ, ಈ ಘಟನೆಯಲ್ಲಿ ಯಾರನ್ನು ಕೆಲಸದಿಂದ ಹೊರ ಹಾಕುವುದಿಲ್ಲವೆಂಬ ಭರವಸೆ ಕೊಡಬೇಕೆಂದೂ ಕೇಳಿದ್ದಾರೆ ಮತ್ತು 144 ನೇ ಸೆಕ್ಷನ್ ವಾಪಸಾಗಬೇಕೆಂದೂ ಕೇಳಿದ್ದಾರೆ. ಈ ಕ್ರಮ ತೆಗೆದುಕೊಂಡಲ್ಲಿ ಶಾಂತ ವಾತಾವರಣ ಕಲ್ಪಿತವಾಗುವುದೆಂದೂ, ನಂತರದಲ್ಲಿ ಸಂಧಾನದ ಮೂಲಕ ಇತರ ಪ್ರಶ್ನೆಗಳನ್ನು ಬಗೆಹರಿಸಬಹುದೆಂದು ತಿಳಿಸಿದ್ದಾರೆ. ನೌಕರರ ಈ ಕನಿಷ್ಠ ಬೇಡಿಕೆಗಳಿಗೆ ಸರಕಾರದವರು ಕೂಡಲೇ ಗಮನವಿತ್ತು ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದು ಅಗತ್ಯ.

ಜನರಲ್ ಮ್ಯಾನೇಜರ್ ಶ್ರೀ ನಾಗೇಶ್ ವಜಾ ಆಗಲಿ

ವಿಮಾನ ಕಾರ್ಖಾನೆಯು ನಮ್ಮ ರಾಷ್ಟ್ರೀಯ ಕೈಗಾರಿಕೆಯಲ್ಲಿ ಅತಿ ಮುಖ್ಯವಾದುದಾಗಿದೆ. ದೇಶದ ರಕ್ಷಣೆಯ ದೃಷ್ಟಿಯಲ್ಲಿ ಇದು ಬಹಳ ಮುಖ್ಯತ್ವವುಳ್ಳದ್ದಾಗಿದೆ. ಹನ್ನೊಂದು ಸಾವಿರ ನೌಕರರನ್ನೊಳಗೊಂಡ ಈ ಕೈಗಾರಿಕೆ ಎಲ್ಲ ರೀತಿಯಲ್ಲಿಯೂ ಅಭಿವೃದ್ಧಿ ಹೊಂದುವುದು ಅಗತ್ಯ. ಕೈಗಾರಿಕಾ ಶಾಂತಿ ನೆಲಸಬೇಕಾದುದು ಅತ್ಯವಶ್ಯ. ನೌಕರರ ಹಿತವನ್ನು ಕಾಪಾಡಿ, ಅವರ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸುವುದು ಅವಶ್ಯ. ಇಂಥ ಕೈಗಾರಿಕೆಯನ್ನು ನಡೆಸಲು ಜವಾಬ್ದಾರಿಯ ಹೊಣೆ ಇರುವ ಅಧಿಕಾರಿಗಳು ಸರಿಯಾಗಿ ವರ್ತಿಸಬೇಕು. ಆದರೆ ಜನರಲ್ ಮ್ಯಾನೇಜರ್ ಆಗಿರುವ ಶ್ರೀ ನಾಗೇಶ್‌ರವರು ನೌಕರರ ಮೇಲೆ, ಸಂಘದ ಮೇಲೆ ಸೇಡು ತೀರಿಸಿಕೊಳ್ಳುವ ನೀತಿ ಅನುಸರಿಸುತ್ತಿದ್ದಾರೆ. ಸಂಘವನ್ನು ಮುರಿಯಲು ಹಠ ತೊಟ್ಟಿರುವಂತೆ ವರ್ತಿಸುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದಲೂ ನೌಕರರ ನ್ಯಾಯವಾದ ಬೇಡಿಕೆಗಳನ್ನು ತಿರಸ್ಕರಿಸುತ್ತಾ ಬಂದಿದ್ದಾರೆ. ಸಂಘದ ನಾಯಕರುಗಳಿಗೆ ಕಿರುಕುಳ ಕೊಡುತ್ತಿದ್ದುದಲ್ಲದೆ, ನೌಕರರನ್ನು ಪ್ರಚೋದಿಸಿದ್ದಾರೆ. ಸಂಘದ ನಾಯಕರುಗಳನ್ನು ಕೆಲಸದಿಂದ ಹೊರದೂಡಿ, ನೌಕರರ ನಡುವೆ ಅಶಾಂತಿಯನ್ನು ಬಿತ್ತಿದ್ದಲ್ಲದೆ, ಸೆಕ್ಯೂರಿಟಿ ಮತ್ತು ಪೋಲೀಸರ ಸಹಾಯದಿಂದ ನೌಕರರ ಮೇಲೆ ದೌರ್ಜನ್ಯ ನಡೆಸಿದುದರಿಂದಲೇ ಫೆಬ್ರುವರಿ 25ರ ಘಟನೆಗಳಿಗೆ, ಬೈಠಕ್ ಮುಷ್ಕರಕ್ಕೆ ಕಾರಣವಾಯಿತು. ಈಗಲೂ ಸಹ ಅವರು ಅದೇ ನೀತಿ ಅನುಸರಿಸುತ್ತಿದ್ದಾರೆ. ಕೈಗಾರಿಕೆಯ ಹಿತದೃಷ್ಟಿಯಿಂದ, ರಾಷ್ಟ್ರದ ಹಿತದೃಷ್ಟಿಯಿಂದ ಇಂಥ ನೀತಿಯು ಬಹಳ ಕೆಡಕುಂಟುಮಾಡುತ್ತದೆ. ಸರಕಾರದ ಆದೇಶಗಳನ್ನು ಸಹ ಉಲ್ಲಂಘಿಸುತ್ತಿರುವ ಇಂಥ ಅಧಿಕಾರಿಗಳನ್ನು ಕೂಡಲೇ ಕಿತ್ತು ಹಾಕಬೇಕು. ಸೇಡು ತೀರಿಸಿಕೊಳ್ಳುವ ಮನೋಭಾವವಿರುವ ಅಧಿಕಾರಿಗಳಿದ್ದಲ್ಲಿ ಕೈಗಾರಿಕಾ ಶಾಂತಿ ದುಸ್ಸಾಧ್ಯ. ಕೇಂದ್ರ ಸರಕಾರವು ಕೂಡಲೇ ಶ್ರೀ ನಾಗೇಶ್‌ರವರನ್ನು ವಜಾಮಾಡಲಿ.

ವಿಮಾನ ಕಾರ್ಖಾನೆ ನೌಕರರಿಗೆ ನ್ಯಾಯ ದೊರಕಲಿ, ಅವರ ಹೋರಾಟ ಯಶಸ್ವಿಯಾಗಲಿ.

ಓದುಗರಲ್ಲಿ....

ಧಾರಾವಾಹಿಯಾಗಿ 'ಜನಶಕ್ತಿ' ಯಲ್ಲಿ ಪ್ರಕಟಿಸಲಾಗುತ್ತಿರುವ **'ಮನೆ ಮುರಿದ ಮಗ'** ನಾಟಕವನ್ನು ಈ ಬಾರಿ ಪ್ರಕಟಿಸಲು ಸ್ಥಳದ ಅಭಾವದಿಂದಾಗಿ ಸಾಧ್ಯವಾಗುದದಕ್ಕಾಗಿ ನಾವು ವಾಚಕರ ಕ್ಷಮೆ ಕೋರುತ್ತೇವೆ.

ಮುಂದಿನ ವಾರದಿಂದ ಎಂದಿನಂತೆ **'ಮನೆ ಮುರಿದ ಮಗ'** ಪ್ರಕಟವಾಗುವುದು.

ಸಂಪಾದಕ.

REG. No. M. 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone· 3810